ಮಾನಸಿ

ತಿಂಗಳ ಪತ್ರಿಕೆ

ಮೇ : 2001

ನರ್ಮದಾ ಬಚಾವೋ ಆಂದೋಲನದ ರೂವಾರಿ
ಮೇಧಾ ಪಾಟ್ಕರ್ ಸಂದರ್ಶನ

ಮಲಯಾಳ ಸಣ್ಣ ಕತೆಗಳಲ್ಲಿ ಸ್ತ್ರೀವಾದ
ಬೆಳೆದು ಬಂದ ಬಗೆ

ಮನೆಗೆಲಸ ಮಾಡುವ ಮಹಿಳೆಯರ
ಸಂಘಟನೆ

ಭೂಮಿ ಗಾಥೆ

ಅಸಂಘಟಿತ ಮಹಿಳೆಯರು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 5

ಮೇ : 2001

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **4-00** ರೂ.

ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಮನೆಗೆಲಸದ ಬಗ್ಗೆ ಚರ್ಚೆ ನಡೆದು ಮೌಲೀಕರಣ ನಡೆಯುತ್ತಿರುವ ಸಂದರ್ಭದಲ್ಲಿಯೂ ಮಹಿಳೆಯರು ಮನೆಗೆಲಸದ ಹೊರೆಗಳಿಂದ ಮುಕ್ತರಾಗಿಲ್ಲ. ಅಸಂಘಟಿತ ಕ್ಷೇತ್ರದ ಮಹಿಳೆಯರು ಅನುಭವಿಸುವ ಯಾತನೆಗಳು ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ. ದುಡಿಯುವ ಮಹಿಳೆಯರು ಹೊರಗೆ ದುಡಿಯುವ ಅವಧಿಯನ್ನು ಹೆಚ್ಚಿಸಿಕೊಳ್ಳಲೇಬೇಕಾದ ಆರ್ಥಿಕ ಸಂದರ್ಭದಲ್ಲಿ ಖಾಸಗೀಕರಣಕ್ಕೊಳಗಾಗುತ್ತಿರುವ ಆಸ್ಪತ್ರೆಗಳು ಕೈಗೆಟುಕದಂತಾಗಿ ಆರೋಗ್ಯದ ಸ್ಥಿತಿ ಶೋಚನೀಯವಾಗತೊಡಗಿದೆ.

ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಸಂಖ್ಯೆ ಹೆಚ್ಚಾಗಿದ್ದರೂ ಅವರ ಸ್ಥಿತಿಯ ಮಟ್ಟವನ್ನು ಸುಧಾರಿಸುವಲ್ಲಿ ಯಾವುದೇ ರೀತಿಯ ಪ್ರಯತ್ನಗಳೂ ನಡೆಯುತ್ತಿಲ್ಲ.

'Golden hand shake' ಎಂದು ಕರೆಯಲ್ಪಡುವ ಇಚ್ಛಿತ ನಿವೃತ್ತಿ ವೇತನವೂ ಸಹ ಮಹಿಳೆಯರನ್ನು ಸಂತೋಷವಾಗಿಡುವಲ್ಲಿ ಸಹಕಾರಿಯಾಗಿಲ್ಲ. ಸಾಲ, ಕಡಿತಗಳೆಲ್ಲ ಕಳೆದು ಸಿಗುವ ಮೊತ್ತ ಇಚ್ಛಿತ ನಿವೃತ್ತದಾರರಲ್ಲಿ ಭ್ರಮನಿರಸನ ಹುಟ್ಟುಹಾಕಿದೆ. Golden shake hand Tin shake hand ಆಗುತ್ತಿರುವುದು ಐವತ್ತು ದಾಟಿದ ಮಹಿಳೆಯರಲ್ಲಿ ಮತ್ತೆ ಪಾರ್ಟ್ ಟೈಂ ಕೆಲಸಗಳನ್ನು ಹುಡುಕುವ ಹೊರೆಯನ್ನು ಹಾಕತೊಡಗಿದೆ.

ಸಾರ್ವಜನಿಕ ಉದ್ಯಮ ಕ್ಷೇತ್ರಗಳು - ಕಿರ್ಲೋಸ್ಕರ್, ಎನ್.ಜಿ.ಇ.ಎಫ್. ಕೋಲಾರದ ಚಿನ್ನದ ಗಣಿ ಯಂತ್ರವು ಮುಚ್ಚಿ ಹೋಗುತ್ತಿರುವ ಸಂದರ್ಭದಲ್ಲಿ ಬದುಕಿನ ಮಟ್ಟಗಳು ಕುಸಿದು ಬೀಳುತ್ತಿರುವುದಷ್ಟೇ ಅಲ್ಲ, ಆರ್ಥಿಕ ಹೊರೆಯ ಭಾರವನ್ನು ಮಹಿಳೆಯರು ಹೊತ್ತುಕೊಳ್ಳುವತ್ತ ದೂಡತೊಡಗಿವೆ. ದಿನಗೂಲಿಗಳಾಗಿ ಕೆಲಸ ಮಾಡುವ ಅಥವಾ ಅದನ್ನೂ ಮಾಡದಂತಿರುವ ಪುರುಷರ, ಕುಟುಂಬದ ನಿರ್ವಹಣೆಯೂ ಹೆಂಗಸರ ಕರ್ತವ್ಯವಾಗತೊಡಗಿವೆ.

ಅಮೆರಿಕದಲ್ಲಿನ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಬ್-ಕಾಂಟ್ರ್ಯಾಕ್ಟ್‌ಗಳು ಭಾರತದಲ್ಲಿ ಸಿಗದೇ ಹೋಗುತ್ತಿರುವುದರಿಂದ ಸಣ್ಣ ಸಣ್ಣ ಕಂಪ್ಯೂಟರ್ ಕಂಪನಿಗಳೂ ಸಹ ಮುಚ್ಚಿಹೋಗತೊಡಗಿವೆ. ಏನು ವಿದ್ಯಾಭ್ಯಾಸ ಮಾಡಬೇಕೆಂದು ಅರ್ಥವಾಗದೇ ವಿದ್ಯಾರ್ಥಿಗಳು ಕಣ್ಣು ಕಣ್ಣು ಬಿಡುವಂತಾಗಿದೆ. ಅಮೆರಿಕಾ ಹಾಗೂ ಇತರ ಕಡೆಗಳಲ್ಲಿ ಕಂಪ್ಯೂಟರ್‌ಗಳಲ್ಲಿ ಕೆಲಸ ಮಾಡಿ ಪಿಂಕ್ ಸ್ಲಿಪ್ ತೆಗೆದುಕೊಂಡು ವಾಪಸ್ಸು ಭಾರತಕ್ಕೆ ಬರುತ್ತಿರುವ ಕಂಪ್ಯೂಟರ್ ಜ್ಞಾನಿಗಳ ಸ್ಥಿತಿಯಿಂದಾಗಿ ಉದ್ಯೋಗದ ಬಗ್ಗೆಗಿನ ಆತಂಕಗಳು ಹೆಚ್ಚಾಗತೊಡಗಿವೆ. ಇಪ್ಪತ್ತೊಂದನೆಯ ಶತಮಾನದಲ್ಲಿ ನಾವೆಲ್ಲಿದ್ದೇವೆ ಎನ್ನುವ ಆತಂಕದ ಕ್ಷಣಗಳನ್ನು ಕುರಿತು ನಾವು ಮತ್ತಷ್ಟು ಇಂದು ಯೋಚಿಸಬೇಕಾಗಿದೆ.

○ ಸಂಪಾದಕೀಯ ಮಂಡಳಿ

ನರ್ಮದಾ ಬಚಾವೋ ಆಂದೋಲನದ ರೂವಾರಿ ಮೇಧಾ ಪಾಟ್ಕರ್ ಸಂದರ್ಶನ

❑ ಸೋನ್ಯಾ ತಿಮ್ಮಯ್ಯ

80ರ ದಶಕದ ಪ್ರಾರಂಭದಲ್ಲಿ ತಮ್ಮ ಸಾಮಾಜಿಕ ಅಸಮತೋಲನದ ಡಾಕ್ಟರೇಟ್ ಅಧ್ಯಯನದ ಭಾಗವಾಗಿ ಗುಜರಾತ್ ನರ್ಮದಾ ಕಣಿವೆಯ ಅಣೆಕಟ್ಟು ಯೋಜನೆಯನ್ನು ಮೇಧಾ ಪ್ಕಾಟ್ಕರ್ ಅಭ್ಯಸಿಸಲು ತೊಡಗಿದರು. ರಾಷ್ಟ್ರದ ಪ್ರಗತಿಯ ಹೆಸರಿನಲ್ಲಿ ಆದಿವಾಸಿಗಳ ಮೇಲೆ ಆಗುವ ಭಯಂಕರ ಅನಾಹುತಗಳನ್ನು ಕಂಡು ಆದಿವಾಸಿಗಳ ನಡುವೆಯೇ ಇದ್ದು ಅವರ ಬದುಕಿನ ಹೋರಾಟಗಳನ್ನು ಮನಗಾಣತೊಡಗಿದರು. ಈ ಅಣೆಕಟ್ಟುಗಳ ಯೋಜನೆಯಿಂದ ಸಾವಿರಾರು ಜನರು ನಿರಾಶ್ರಿತರಾಗುತ್ತಿದ್ದು, ಅವರ ಪುನರ್ ವಸತಿಯ ಬಗ್ಗೆ ಸರ್ಕಾರಕ್ಕೆ ಕಾಳಜಿಯೇ ಇರಲಿಲ್ಲ. ಅವರ ಮಧ್ಯೆ ಬದುಕತೊಡಗಿದ ಮೇಧಾ ಪಾಟ್ಕರ್ ಡಾಕ್ಟರೇಟ್ ಮರೆತು ಅವರ ಸಮಸ್ಯೆಗಳಿಗೆ ಧ್ವನಿಯಾಗ ತೊಡಗಿದರು. 'ನರ್ಮದಾ ಬಚಾವ್ ಆಂದೋಲನ' ನಿರಾಶ್ರಿತರಿಗೆ ಪುನರ್ ವಸತಿ ಒದಗಿಸಬೇಕೆಂಬ ಬೇಡಿಕೆಯೊಂದಿಗೆ ಪ್ರಾರಂಭವಾಯಿತು.

ಕಾಲ ಸರಿದಂತೆ ಅಣೆಕಟ್ಟಿನ ಯೋಜನೆಯ ಮೂಲದಲ್ಲಿಯೇ ತಪ್ಪುಗಳಿರುವುದನ್ನು 'ನರ್ಮದಾ ಬಚಾವ್ ಆಂದೋಲನ' ಮನಗಾಣ ತೊಡಗಿತ್ತು. ಅಭಿವೃದ್ಧಿ; ಪ್ರಗತಿಯ ಮಾದರಿಯಲ್ಲಿಯೇ ಎಣಿಸಲಾರದ ದೊಡ್ಡ ತಪ್ಪು ಇರುವುದು ಕಂಡುಬರತೊಡಗಿತು. ಈ ಮಾದರಿಯ ಅಭಿವೃದ್ಧಿಗೋಸ್ಕರ ಸಾವಿರಾರು ಸಂಖ್ಯೆಯಲ್ಲಿ ಆದಿವಾಸಿಗಳು ತಮ್ಮ ಬಲಿ ನೀಡಬೇಕಿತ್ತು. ಜೀವನದ ಭಾಗವಾದ ಪ್ರಾಕೃತಿಕ ಸಂಪತ್ತನ್ನು ಧಾರೆ ಎರೆಯಬೇಕಾಗಿತ್ತು. ಇದು ಯಾವ ಮಾದರಿಯ ಅಭಿವೃದ್ಧಿ? ಯಾರಿಗಾಗಿ? ಯಾರ ಹಿತಾಸಕ್ತಿಗಾಗಿ ಎಂಬಂತಹ ಪ್ರಶ್ನೆಗಳನ್ನು 'ನರ್ಮದಾ ಬಚಾವ್ ಆಂದೋಲನ' ಗಂಭೀರವಾಗಿ ಎತ್ತಲು ಪ್ರಾರಂಭಿಸಿತು. ಈ ಪರಿಣಾಮವಾಗಿ ನಡೆದ ಹೋರಾಟದಿಂದ 1993ರಲ್ಲಿ ವಿಶ್ವಬ್ಯಾಂಕ್ ನರ್ಮದಾ ಅಣೆಕಟ್ಟು ಯೋಜನೆಗೆ ಫಂಡ್ ಮಾಡುವುದನ್ನು ನಿಲ್ಲಿಸಿತು.

ನರ್ಮದಾ ಅಣೆಕಟ್ಟಿನ ವಿರುದ್ಧ ಧ್ವನಿ ಎತ್ತಿ, ಆಂದೋಲನ ಮಾಡಿದ ಪರಿಣಾಮವಾಗಿ ದೊಡ್ಡ ದೊಡ್ಡ ಯೋಜನೆಗಳು, ಸಾಮಾನ್ಯ ಜನರ ಬದುಕಿಗೆ ಆತಂಕ, ಅಡ್ಡಿ ಒಡ್ಡಿ ನಾಶ ಮಾಡುತ್ತಿವೆ ಎಂಬ ಸತ್ಯ ಬಹು ಜನರಿಗೆ ಮನವರಿಕೆಯಾಗ ತೊಡಗಿದೆ. ಇದರ ಬೆನ್ನೆಲುಬಾಗಿರುವ ಮೇಧಾ ಪಾಟ್ಕರ್ ಸಾರ್ವಜನಿಕವಾಗಿ ಪ್ರಸಿದ್ಧಿಯಾಗಲೂ ಪ್ರಯತ್ನಿಸುತ್ತಿದ್ದಾರೆ ಎಂದು ಹೇಳುವವರೂ ಇದ್ದಾರೆ. ಆದರೆ ಹಾಗೆ ಪ್ರಯತ್ನಿಸುವವರು ಅಪಾಯಕಾರಿ ಹಂತಗಳಲ್ಲಿ ತಮ್ಮ ಜೀವ ಭಯವನ್ನೆಣಿಸದೆ ತಮ್ಮನ್ನು ತೊಡಗಿಸಿಕೊಳ್ಳಲಾರರು. ಮೇಧಾಪಾಟ್ಕರ್ ಎಲ್ಲವನ್ನೂ ದಾಟಿ ನರ್ಮದಾ ಹೋರಾಟದ ಜೊತೆ ತಮ್ಮ ಬದುಕನ್ನು ಕಂಡುಕೊಂಡುಬಿಟ್ಟಿದ್ದಾರೆ. ಜವಹರಲಾಲ್ ನೆಹರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಸ್ಥಾನ ಎಂದು ಹೇಳಿದ್ದು ಎಷ್ಟು ಕೃತಕ, ಅನ್ಯಾಯ ಎಂಬುದನ್ನು ನರ್ಮದಾ ನಂಬಿ ಬದುಕಿದ ಆದಿವಾಸಿಗಳ ಜೀವನ ಕ್ರಮದಿಂದ ಎತ್ತಿತೋರಿಸಿದ್ದಾರೆ. ಅಣೆಕಟ್ಟುಗಳು ದೇವಸ್ಥಾನಗಳಾಗುವ ಬದಲು ಆಶ್ರಿತರನ್ನು ದಿಕ್ಕಾಪಾಲಾಗಿಸಿ, ತಬ್ಬಲಿಗಳನ್ನಾಗಿಸಿ ಹಾಹಾಕರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ ಎನ್ನುವ ಸತ್ಯ ನಮ್ಮೊಳಗೆ, ನಮ್ಮೆದೆಯೊಳಗೆ ಆಳವಾಗಿ ಇಳಿಯುವ ಹೊತ್ತಿಗಾಗಲೇ ಸುಪ್ರೀಂ ಕೋರ್ಟ್ ನೀಡಿರುವ ನ್ಯಾಯ ನಮ್ಮೆಲ್ಲರನ್ನೂ ದಂಗುಬಡಿಸಿದೆ.

ಹಲವು ವರ್ಷಗಳ ಹಿಂದೆ 'ನರ್ಮದಾ ಬಚಾವ್ ಆಂದೋಲನ' ನರ್ಮದಾ ಅಣೆಕಟ್ಟಿನ ಯೋಜನೆಯ ತಡೆಗೆ ಸುಪ್ರೀಂ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಪೆಟಿಷನ್ ಹಾಕಿತ್ತು. ಆದರೆ ಉಚ್ಚ ನ್ಯಾಯಾಲ್ಯಯ ಜನರ ಆಸಕ್ತಿಯನ್ನು ಎತ್ತಿಹಿಡಿಯುವ ಬದಲು ಅಣೆಕಟ್ಟು ಕಟ್ಟಲು ಪರವಾನಗಿ ನೀಡಿದೆ. ಪುನರ್‌ವಸತಿ ಕಲ್ಪಿಸಿ, ಪರಿಸರ ರಕ್ಷಿಸಿಯೇ ಅಣೆಕಟ್ಟು ಕಟ್ಟುವ ಯೋಜನೆ ಮುಂದುವರಿಸಬಹುದು ಎಂದು ಉಚ್ಚ ನ್ಯಾಯಾಲಯ ನ್ಯಾಯ ನೀಡಿದೆ.

ಇದು ಜನರ ಆಶಯಕ್ಕೆ ವಿರುದ್ಧವಾದ ನ್ಯಾಯ. ಮೇಧಾ ಪಾಟ್ಕರ್ ಇದನ್ನು ವಿರೋಧಿಸಿ ಮಾತನಾಡಲೇಬೇಕಾಗಿದೆ ಎನ್ನುತ್ತಾರೆ. ಆಂದೋಲನಕ್ಕೆ ಸಂಬಂಧಪಟ್ಟಂತೆ ಹಲವಾರು ಸಭೆಗಳಲ್ಲಿ ಭಾರತದಾದ್ಯಂತ ಮೇಧಾ ಭಾಗವಹಿಸತೊಡಗಿದ್ದಾರೆ. ಅವರು ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದಾಗ ಸೋನಾ ತಿಮ್ಮಯ್ಯ ಅವರನ್ನು ಸಂದರ್ಶಿಸಿದ್ದಾರೆ. ಆ ಸಂದರ್ಶನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

● ***ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡುವ ಅತ್ಯುನ್ನತ ಅಧಿಕಾರ ಸ್ಥಾನ ಎಂದು ಇಡೀ ದೇಶ ಭಾವಿಸಿದೆ. ಈಗ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ 'ನರ್ಮದಾ ಬಚಾವೋ ಆಂದೋಲನ' ತೆಗೆದುಕೊಳ್ಳುವ ಮುಂದಿನ ಕಾನೂನಿನ ಹೆಜ್ಜೆ ಏನು?***

ಮೇಧಾ ಪಾಟ್ಕರ್ : ಕಾನೂನು ಬದ್ಧವೋ, ಕಾನೂನಿಗೆ ವಿರೋಧವೋ (ನಗು) ನಾವು ತೀರ್ಪಿಗೆ ಪ್ರತಿಕ್ರಿಯಿಸಿಯೇ ತೀರುತ್ತೇವೆ. ಸರ್ವೋಚ್ಚ ನ್ಯಾಯಾಲಯ ದೇಶದ ಉನ್ನತ ನ್ಯಾಯಪೀಠವೇ ಆಗಿರಬಹುದು. ಆದರೆ ಅದು ಎಲ್ಲ ವಿಷಯಗಳ ಬಗ್ಗೆ, ಎಲ್ಲ ಸಂಗತಿಗಳ ಬಗ್ಗೆ ಸಕಲವನ್ನು ತಿಳಿದಿರುವ ಅಂತಿಮ ಪೀಠವಾಗಬೇಕಿಲ್ಲ. ಹಾಗೆ ಅದು ಪರಮಪವಿತ್ರವೂ ಅಲ್ಲ. ಅಪೆಕ್ಸ್ ನ್ಯಾಯಾಲಯ ಜನರ ಸಮಸ್ಯೆಗಳಿಗೆ ಜನರ ಕಾಣ್ಕೆಗೆ ಸ್ಪಂದಿಸುವ ಅಗತ್ಯವಿದೆ. ಸರ್ಕಾರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಎದುರಾದಾಗ ನ್ಯಾಯಾಲಯ ಪಕ್ಷಪಾತ ಮಾಡಕೂಡದು. ಜನರ ಕ್ರಿಯೆ ಹಾಗೂ ಅಭಿಪ್ರಾಯಗಳ ಪ್ರಶ್ನೆ ಬಂದಾಗ ಅದು ನಿಷ್ಪಕ್ಷಪಾತವಾದ ನಿಲುವು ತೆಗೆದುಕೊಳ್ಳುವುದು ಅತ್ಯಗತ್ಯ.

ಈಗ ನೀಡಿರುವ ತೀರ್ಪಿನಲ್ಲಿ ಸರ್ಕಾರ ಹಾಗೂ ಉದ್ಯಮದ ಮುಖವನ್ನು ಸ್ಪಷ್ಟವಾಗಿ ಬಿಂಬಿಸುತ್ತಿದೆ. ಕಾರ್ಯಾಂಗದ ಯಾವುದೇ ನಿಲುವನ್ನು ಪ್ರಶ್ನಿಸುವಂತಿಲ್ಲ ಎಂದಿದೆ. ಕಾರ್ಯಾಂಗ ಜನ ವಿರೋಧಿ, ಸಂವಿಧಾನ ವಿರೋಧಿ ನಿಲುವು ತೆಗೆದುಕೊಂಡಿದೆ ಎಂದು ಹೆಚ್ಚುಹೆಚ್ಚು ಜನರು ಭಾವಿಸಿದ್ದಾರೆ. ಶಾಸಕಾಂಗ ಹಾಗೂ ಕಾರ್ಯಾಂಗಗಳು ತೆಗೆದುಕೊಂಡಿರುವ ತೀರ್ಮಾನ ಸರಿಯೇ, ತಪ್ಪೇ ಎಂದು ಪರಿಶೀಲಿಸಲು ನ್ಯಾಯಾಂಗ ತಿರಸ್ಕರಿಸುವುದಾದರೆ ನ್ಯಾಯಾಲಯದ ಪಾತ್ರವಾದರೂ ಎಂಥಹುದು. ಪರಿಸ್ಥಿತಿ ಹೀಗಿರುವಾಗ ನಮಗೆ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸದೆ ಬೇರೆ ದಾರಿಯೇ ಇಲ್ಲ. ಈ ಮೂಲಕ ನ್ಯಾಯಾಲಯ ಜನತೆ ತನಗೆ ನೀಡಿದ ಅಧಿಕಾರದಾಚೆಗೆ ಸಾಗುತ್ತಿದೆ. ಜನ ನ್ಯಾಯಾಲಯದಲ್ಲಿ ಇಟ್ಟಿರುವ ನಂಬಿಕೆ ಮತ್ತೆ ಗಟ್ಟಿಯಾಗಬೇಕು.

ಸರ್ವೋಚ್ಚ ನ್ಯಾಯಾಲಯ ತನಿಖೆಯ ಆಯಾಮವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದಕ್ಕೆ ನಮಗೆ ವಿಷಾದವಿದೆ. ನಾವು ಸಲ್ಲಿಸಿದ ಪುನರ್ ಪರಿಶೀಲನಾ ಮನವಿಯನ್ನು ನ್ಯಾಯಾಧೀಶರು ತಮ್ಮ ಕೋಣೆಯಲ್ಲಿಯೇ ಕುಳಿತು ತಿರಸ್ಕರಿಸಿದರು. ನೂರಾರು ದಾಖಲೆಗಳನ್ನು ಅವರು ಕೋಣೆಯಲ್ಲಿ ಕುಳಿತು ಓದಿರಬಹುದು, ಆದರೆ ಕಾಗದದಾಚೆಗಿನ ಕೆಲವು ಸಂಗತಿಗಳ ಬಗ್ಗೆ ಪರಿಶೀಲಿಸಲು ಅವರಿಂದ ಸಾಧ್ಯವಾಗಲಿಲ್ಲ. ಇದು ವಾಸ್ತವ.

ವಿಚಾರಣೆಗೆ ಅವಕಾಶ ನೀಡದೆ, ಕೇವಲ ಕೋಣೆಯಲ್ಲಿಯೇ ಕುಳಿತು ವಿಚಾರಣೆಯನ್ನೇ ನಡೆಸದೆ, ಪುನರ್ ಪರಿಶೀಲನಾ ಮನವಿಯನ್ನು ತಿರಸ್ಕರಿಸಿರುವುದರ ಬಗ್ಗೆ ನಮಗೆ ನೋವಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಜನತೆಯ ಚರ್ಚೆಗೆ ಕಾರಣವಾಗಬೇಕಾದ ಸಂದರ್ಭದಲ್ಲಿ ನ್ಯಾಯಾಲಯ ಈ ರೀತಿ ನಡೆದುಕೊಂಡಿತು. ಇದು ನ್ಯಾಯಾಲಯದ ಧೋರಣೆ ಹಾಗೂ ಮಿತಿಗಳನ್ನು ತೋರಿಸುತ್ತದೆ.

ಹಾಗಾಗಿ ನಾವು ಮತ್ತೆ ಯಾವುದೇ ರೀತಿಯ ಪುನರ್ ಪರಿಶೀಲನಾ ಮನವಿಯನ್ನು ಸಲ್ಲಿಸುವುದಿಲ್ಲ. ಏಕೆಂದರೆ ನ್ಯಾಯಾಲಯ ನಾವು ಯೋಚಿಸಿದಷ್ಟು ಮುಕ್ತವಾಗಿಲ್ಲ, ಅಥವಾ ಎಲ್ಲಿ ತಪ್ಪಾಗಿದೆ ಎಂದು ಪರಿಶೀಲಿಸಲು ಬಯಸುವುದಿಲ್ಲ. ಏಕೆಂದರೆ ಹಾಗೆ ಮಾಡಬೇಕೆಂದರೆ ಅವರು 'ನೆಲಕ್ಕೆ' ಇಳಿಯುವ ಅಗತ್ಯವಿದೆ.

ಸದ್ಯಕ್ಕೆ ನಮ್ಮ ವಿರುದ್ಧ ನ್ಯಾಯಾಲಯ ನಿಂದನೆಯ ಆರೋಪವಿರುವುದರಿಂದ ಇದನ್ನು ನಾವು ನ್ಯಾಯಾಲಯದ ವಿರುದ್ಧದ ಹೋರಾಟಕ್ಕೆ ಬಳಸಿಕೊಳ್ಳುತ್ತೇವೆ. ನಾವು ನ್ಯಾಯಾಲಯವನ್ನು ತಿರಸ್ಕರಿಸುತ್ತಿಲ್ಲ. ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನ್ಯಾಯಾಂಗ ಖಂಡಿತ ಪ್ರತಿಕ್ರಿಯಿಸುವ ಸಾಧ್ಯತೆ ಇದೆ. ಹಾಗಾಗಿ ನಮ್ಮನ್ನು ಕರೆದರೆ ನ್ಯಾಯಾಲಯಕ್ಕೆ ಹೋಗುತ್ತೇವೆ. ನಮ್ಮನ್ನು ಸಮರ್ಥಿಸಿಕೊಳ್ಳುತ್ತೇವೆ. ತಪ್ಪಾಗಿರುವುದನ್ನು ಪ್ರತಿಭಟಿಸುತ್ತೇವೆ. ಯಾವುದೇ ರಾಜಿ ಇಲ್ಲದೆ, ನಮ್ಮ ನಿಲುವನ್ನು ಸ್ಪಷ್ಟಗೊಳಿಸಲು ಬಯಸುತ್ತೇವೆ.

● *ನರ್ಮದಾ ಬಚಾವೋ ಆಂದೋಲನದ ಮುಂದಿನ ಹೋರಾಟದ ಹಾದಿ ಏನು? ಮುಂದಿನ ದಿನಗಳಲ್ಲಿ ನೀವು ಯಾವ ರೀತಿಯ ಹೆಜ್ಜೆ ಇಡಲು ಬಯಸುತ್ತೀರಿ?*

ಮೇಧಾ : ಮುಂದಿನ ದಿನಗಳಲ್ಲಿ ನಮ್ಮ ಹೋರಾಟ ಎಲ್ಲಿರುತ್ತದೆ ಎಂದು ಹೇಳುವುದು ಕಷ್ಟ. ನರ್ಮದಾ ನದಿ ಹರಿಯುತ್ತಲೇ ಇರುತ್ತದೆ. ಸಾಕಷ್ಟು ನೀರೂ ಹರಿದಿರುತ್ತದೆ. ಆದರೆ ಒಂದು ಸಂಗತಿಯಂತೂ ಖಚಿತ. ನರ್ಮದಾ ಬಚಾವೋ ಆಂದೋಲನ ಈಗ ನಿಂತಿರುವ ನೆಲೆಯಿಂದ ಮುಂದುವರಿಯಲೇ ಬೇಕು. ಈ ಹೇಳಿಕೆಯಲ್ಲಿ ದ್ವಂದ್ವವಿದೆ ಎಂದು ನಿಮಗನ್ನಿಸಬಹುದು. ಅಲ್ಲಿರುವ ಜನತೆ ಪ್ರವಾಹವನ್ನು ಎದುರಿಸಲೇಬೇಕು. ಅಲ್ಲಿನ ಹಳ್ಳಿಗಳಲ್ಲಿ ಮುಂದಿನ ಮುಂಗಾರಿನ ಸಂದರ್ಭದಲ್ಲಿ ನೀರು ತುಂಬಿಕೊಳ್ಳಬಹುದು. ಜನ ಕೇವಲ ಕಾರ್ಯಕರ್ತರೊಂದಿಗೆ ನಡೆಯುತ್ತಾರೆ ಎಂದು ಭಾವಿಸುವುದು ಸರಿಯಲ್ಲ. ಅವರು ಅವರದೇ ಬದ್ಧತೆಗೆ ತಕ್ಕಂತೆ ಬದುಕುತ್ತಾರೆ.

ಯೋಜನೆ ಈಗಿರುವಂತೆಯೇ ಇರುವವರೆಗೆ ನಮ್ಮ ನಿಲುವಿಗೆ ನಾವು ಅಂಟಿಕೊಂಡಿರಲೇಬೇಕು. ಜೊತೆಯಲ್ಲಿ ಪುನರ್ವಸತಿಗೆ ಭೂಮಿ ಇಲ್ಲದಿರುವುದರಿಂದ ಪರಿಸ್ಥಿತಿ ಮತ್ತಷ್ಟು ಕಠಿಣವಾಗುತ್ತದೆ. 'ನೀವು ರಾಜಿ ಮಾಡಿಕೊಂಡು ಜನರ ಪುನರ್ವಸತಿಗಾಗಿ ಏಕೆ ಕೆಲಸ ಮಾಡಬಾರದು' ಎಂದು ಹೊರಗೆ ನಿಂತು ಕೇಳುವುದು ಸುಲಭ. ನಮಗೆ ಗೊತ್ತು. ಪುನರ್ವಸತಿ ಸಾಧ್ಯವಿಲ್ಲ. ಹಾಗಾಗಿ ಸರ್ವೋಚ್ಚ ನ್ಯಾಯಾಲಯ ಹೇಳುವಂತೆ ಪುನರ್ವಸತಿ ಮಾಡಿ, ಪುನರ್ವಸತಿ ಮಾಡಿ ಎಂದು ಎಷ್ಟು ಕಾಲ ಹೇಳಲು ಸಾಧ್ಯ?

ಪರಿಸರದ ದೃಷ್ಟಿಯಿಂದ ನೋಡಿದರೆ, ಪರಿಸರದ ಪರಿಣಾಮಕ್ಕೆ ಪರಿಹಾರ ನೀಡಿ ಎಂದು ಅವರು ಹೇಳುತ್ತಾರೆ. ಇದು ಕೂಡ ಅಸಾಧ್ಯ. ಇದುವರೆಗೆ ಅವರು ಪುರಾತತ್ವ ಅಧ್ಯಯನ ಹಾಗೂ ಉತ್ಖನನವನ್ನು ಪೂರ್ಣಗೊಳಿಸಿಲ್ಲ. ಪುರಾತತ್ವ ಇಲಾಖೆಯವರು ಹೇಳುವಂತೆ ಎಲ್ಲ ಪ್ರಾಚೀನ ಸ್ಮಾರಕಗಳನ್ನು ಸ್ಥಳಾಂತರಿಸುವುದೆಂದರೆ ಅದಕ್ಕೆ ಇನ್ನೂ ನೂರು ವರ್ಷ ಬೇಕು. ಅವರು ಮಾಡಿದ್ದೆಂದರೆ ಸಂಶೋಧನಾ ಯೋಜನೆಯನ್ನು ನಿಲ್ಲಿಸಿದ್ದು. ಪುರಾತತ್ವ ತಜ್ಞರನ್ನು ವರ್ಗಾವಣೆ ಮಾಡಿದ್ದು.

ಕೆಳಹರಿವಿನ ಪ್ರಶ್ನೆಯನ್ನೇ ತೆಗೆದುಕೊಳ್ಳಿ, ಅವರ ಎಲ್ಲ ಸಭೆಗಳ ದಾಖಲೆಯಲ್ಲಿ ಕೆಳಹರಿವಿನ ಸಮಸ್ಯೆ ಕಾಣಿಸಿಕೊಳ್ಳುವುದು ಇನ್ನು ಮೂವತ್ತು ವರ್ಷಗಳ ನಂತರ ಎಂದು ದಾಖಲಾಗಿದೆ. ಆದರೆ ಅದು ಶುದ್ಧ ಸುಳ್ಳು. ಇದರ ಪರಿಣಾಮ ಕಳೆದ ವರ್ಷದಿಂದಲೇ ಕಾಣಿಸಿಕೊಳ್ಳಲು ಆರಂಭವಾಗಿದೆ. ಅದೂ ಬಹಳ ದೊಡ್ಡ ರೀತಿಯಲ್ಲಿ. ಏಳು ವರ್ಷಗಳ ಹಿಂದೆಯೇ ಇದರ ಪರಿಣಾಮ ಕಾಣಿಸಿಕೊಳ್ಳಲು ಆರಂಭವಾಯಿತು. ಈಗ ಅದರ ಪರಿಣಾಮ ದೊಡ್ಡ ರೀತಿಯಲ್ಲಿಯೇ ಕಾಣಿಸಿಕೊಳ್ಳುತ್ತಿದೆ. ನೀರಿನಲ್ಲಿರುವ ಉಪ್ಪಿನ ಮಟ್ಟ ಕುಸಿಯುತ್ತಿರುವುದರಿಂದ ಟ್ರಕ್ ಗಟ್ಟಲೆ ಮೀನುಗಳು ಸಾಯುತ್ತಿವೆ. ನದಿಯ ಮಾಲಿನ್ಯ ಕೃಷಿ ಭೂಮಿಯ ಮೇಲೆ ಕಾಣಿಸಿಕೊಳ್ಳಲು ಆರಂಭವಾಗಿದೆ. ಯಾವುದೇ ಕಾವಲು ಸಮಿತಿ ಈ ಬಗ್ಗೆ ಗಮನ ಹರಿಸಿಲ್ಲ.

ಎಲ್ಲ ಸುಳ್ಳುಗಳೂ ಕಾಗದದ ಮೇಲೆ ದಾಖಲಾಗುತ್ತಿವೆ. ತಮ್ಮ ಸುಳ್ಳನ್ನು ನಿಜವಾಗಿಸಲು ಅವರು ಟನ್‌ಗಟ್ಟಲೆ ಕಾಗದವನ್ನು ಖರ್ಚು ಮಾಡುತ್ತಿದ್ದಾರೆ. ಇದರ ಆಧಾರದ ಮೇಲೆ ಯೋಜನೆಗೆ ಅನುಮತಿ ದೊರೆತಿರುವುದು. ಇವೆಲ್ಲವುಗಳ ವಿರುದ್ಧ ನಾವಿಂದು ಹೋರಾಟ ನಡೆಸಬೇಕಾಗಿದೆ. ಹಿಂದೆಂದಿಗಿಂತಲೂ ಕಠಿಣತರವಾದ ಹೋರಾಟವನ್ನು ನಾವು ನಡೆಸಬೇಕಾಗಿದೆ. ಏನೇ ಬರಲಿ ಈ ಸವಾಲನ್ನು ಎದುರಿಸುತ್ತೇವೆ ಎಂಬ ತೀರ್ಮಾನವನ್ನು ತೆಗೆದುಕೊಳ್ಳಬೇಕಿದೆ.

ನಾನು ಕೊಟ್ಟ ಕೊನೆಯ ಹೋರಾಟಕ್ಕೆ ಸಜ್ಜಾಗಿದ್ದೇನೆ. ಆದರೆ ಇದು ಒಂದು ರೀತಿಯಲ್ಲಿ ಜವಾಬ್ದಾರಿಯಿಂದ ಪಲಾಯನ ಎಂದು ನನ್ನ ಗೆಳೆಯರು ಹಾಗೂ ಹೋರಾಟಕ್ಕೆ ಬೆಂಬಲ ನೀಡುತ್ತಿರುವವರು ಹೇಳಿರುವುದರಿಂದ ಕಾರ್ಯಾಚರಣೆಯನ್ನು ನಾವು ಮುಂದೂಡಿದ್ದೇವೆ. ಆದರೆ ಎಲ್ಲಿಯವರೆಗೆ ಕಾಯುವುದು ಎಂಬುದು ನನಗೆ ಗೊತ್ತಿಲ್ಲ. ಮುಂಗಾರು ಈ ಸಾರಿ ತನ್ನ ಪರಿಣಾಮ ಮಾಡದೇ ಇರುವುದಿಲ್ಲ. ಸಾಮಾಜಿಕ ನ್ಯಾಯದ ಕಾರ್ಯದರ್ಶಿಗೆ ನಾನು ಹೇಳಿದ್ದಿಷ್ಟು: 'ನಿಮ್ಮ ಬಳಿ ಇರುವುದು ತಪ್ಪು ಅಂಕಿ-ಅಂಶಗಳು. ನೀವು ನಿಮ್ಮಷ್ಟಕ್ಕೆ ನೀವೇ ವಾಸ್ತವವನ್ನು ಅರ್ಥ ಮಾಡಿಕೊಳ್ಳದಿದ್ದರೆ, ಮುಂಗಾರಿನ ಮಳೆ ಪಾಠ ಕಲಿಸುತ್ತದೆ. ಪ್ರವಾಹ ಹಳ್ಳಿಗಳನ್ನು ಮುಳುಗಿಸುತ್ತದೆ. ನೀವು ಆಗ ಪ್ರವಾಹ ಪೀಡಿತರ ಹಾಗೂ ಅಣೆಕಟ್ಟಿನಿಂದ ನೊಂದವರ ಲೆಕ್ಕ ಹಾಕಬಹುದು...'

ಮತ್ತೊಂದು ಹಂತದಲ್ಲಿ ನರ್ಮದಾ ಬಚಾವೋ ಆಂದೋಲನ ವಿಸ್ತೃತ ಹೋರಾಟಕ್ಕೆ ಸಜ್ಜಾಗುತ್ತಿದೆ. ಎನ್‌ಎಪಿಎಂ ಜೊತೆಯಲ್ಲಿ ಸೇರಿ ಹೋರಾಟದ ಹಾದಿ ಬದಲಿಸಲು ಬಯಸುತ್ತಿದೆ. ಆದರೆ ಅದು ನೀವು ನಮಗೆ ಸಹಾಯ ಮಾಡಿ, ನಾವು ನಿಮಗೆ ಸಹಾಯ ಮಾಡುತ್ತೇವೆ ಎನ್ನುವ ಮಾದರಿಯದಲ್ಲ. ಜಾಗತೀಕರಣ ಹಾಗೂ ಉದಾರೀಕರಣದ ಪರಿಣಾಮಗಳ ಬಗ್ಗೆ ಈಗಾಗಲೇ ಹೋರಾಟ ಆರಂಭಿಸಿದ್ದು, ಉಳಿದ ಹೋರಾಟಗಳೊಂದಿಗೆ ನರ್ಮದಾ ಹೋರಾಟವನ್ನು ಸೇರಿಸಲು ನಾವು ಚಿಂತಿಸಿದ್ದೇವೆ. ಇದುವರೆಗೆ ನಾವು ನ್ಯಾಯವಲ್ಲದ ಕೇಂದ್ರೀಕರಣ ನೀತಿಯನ್ನು ವಿರೋಧಿಸುತ್ತಿದ್ದೆವು. ಈಗ ಅದನ್ನೂ ಕೂಡ ಜಾಗತಿಕ ಮಟ್ಟದಲ್ಲಿ ಅಪಹರಿಸಲಾಗುತ್ತಿದೆ.

ಈ ಹೋರಾಟದ ಕೊಂಡಿಗಳನ್ನು ಗುರುತಿಸುವುದು ಸುಲಭ. ನರ್ಮದಾ ಹೋರಾಟದ ತಾಂತ್ರಿಕ ಸಂಗತಿಗಳ ಬಗ್ಗೆ ನಾವು ಮಾತನಾಡುತ್ತಿದ್ದೆವು. ಈಗ ಜಾಗತಿಕ ತಾಂತ್ರಿಕ ಸಂಗತಿಗಳು ಕೇವಲ ಬುಡಕಟ್ಟಿನವರು ದಲಿತರನ್ನಷ್ಟೇ ಅಲ್ಲ, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರನ್ನೂ ಅತಂತ್ರಗೊಳಿಸುತ್ತಿದೆ. ಪಶ್ಚಿಮದ ತಂತ್ರಜ್ಞಾನ ನಮ್ಮ ತಂತ್ರಜ್ಞಾನವನ್ನು ಮಲಗಿಸುತ್ತಿದೆ. ಈ ಮುನ್ನ ಬುಡಕಟ್ಟಿನ ಜನರಿಗಷ್ಟೇ ಆಗುತ್ತಿದ್ದ ಅನ್ಯಾಯ ಈಗ ಮಧ್ಯಮ ವರ್ಗದ ನಗರ ಬದುಕಿನ ಜನರನ್ನೂ ತಲುಪಿದೆ. ಹಾಗಾಗಿ ಹೋರಾಟದ ರೂಪುರೇಕ್ಷೆಯೇ ಬದಲಾಗಬೇಕಾದ ಪರಿಸ್ಥಿತಿ ಇಂದು ನಮ್ಮ ಮುಂದಿದೆ. ನರ್ಮದಾ ಪ್ರಶ್ನೆಯಲ್ಲಿ ಹಳ್ಳಿಯನ್ನು ನಾವು ವಿಶ್ವಬ್ಯಾಂಕ್ ನೊಂದಿಗೆ ಸಮೀಕರಿಸಿದೆವು. ವಿಶ್ವಬ್ಯಾಂಕ್ ವಿರುದ್ಧ ಎಂಟು ವರ್ಷಗಳ ಕಾಲ ಸತತ ಹೋರಾಟ ನಡೆಸಿದೆವು. ಆದರೆ ಈಗ ವಿಶ್ವಬ್ಯಾಂಕ್ ಹಾಗೂ ವಿಶ್ವವ್ಯಾಪಾರ ಸಂಘಟನೆಗಳು ಒಂದಾಗಿವೆ. ಹಾಗೂ ಭಾರತದ ಸಾಮಾಜಿಕ ಬದುಕಿನಲ್ಲಿ ಕೇಂದ್ರ ಪಾತ್ರ ವಹಿಸುತ್ತಿವೆ.

● ***ಆದರೆ ವಿಶ್ವಬ್ಯಾಂಕ್ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದೆಯಲ್ಲ, ಅಣೆಕಟ್ಟೆಗೆ ಆರ್ಥಿಕ ಸಾಲ ನೀಡುವುದನ್ನು ನಿಲ್ಲಿಸಿದೆಯಲ್ಲ....***

ಮೇಧಾ : ನಾನು ಕೇವಲ ನರ್ಮದಾ ಬಗ್ಗೆ ಮಾತ್ರ ಮಾತನಾಡುತ್ತಿಲ್ಲ. ವಿಶ್ವವ್ಯಾಪಾರ ಸಂಘಟನೆ, ವಿಶ್ವಬ್ಯಾಂಕ್, ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿ ಎಲ್ಲವೂ ಒಟ್ಟಾಗಿ, ಒಂದೇ ಸ್ಥಿತಿಯಲ್ಲಿವೆ. ಈ ಮೂರರ ವಿರುದ್ಧ ಒಟ್ಟಾಗಿ ನಾವು ಹೋರಾಟ ಮಾಡಬೇಕಿದೆ. ಈ ಜಾಗತಿಕ ಶಕ್ತಿಗಳ ವಿರುದ್ಧ ಹೋರಾಟ ನಡೆಸದೆ ಬೇರೆ ದಾರಿಯೇ ಉಳಿದಿಲ್ಲ. ನಾವು ವಿಶ್ವಬ್ಯಾಂಕ್ ಯೋಜನೆಯಿಂದ ಹಿಂದೆ ಸರಿಯುವಂತೆ ಮಾಡಿದ್ದು ಹೇಗೆ? ಎಂಬುದು ನಿಮಗೆ ಗೊತ್ತೆ.

ವಿಶ್ವಬ್ಯಾಂಕಿನ ವುಲ್ಫೆನ್ಸನ್‌ನನ್ನು ಸ್ಥಳಕ್ಕೆ ಬಂದು ಬುಡಕಟ್ಟಿನವರ ಅಹವಾಲುಗಳನ್ನು ಕೇಳುವಂತೆ ನಾವು ಮಾಡಿದೆವು. ಮೊದಲು ತಮಗೆ ಸಾಕಷ್ಟು ಸಭೆಗಳಲ್ಲಿ ಭಾಗವಹಿಸಬೇಕಿದೆ ಎಂದು ಅವರು ಹೇಳಿದರು. ಆದರೆ ನಾವು ಸಭೆಗಳೆಲ್ಲ ಮುಗಿಯುವ ತನಕ ಕಾಯುವುದಾಗಿ ಹೇಳಿದೆವು. ಇದು ವಿಶ್ವಬ್ಯಾಂಕಿನ ಅಧ್ಯಕ್ಷರ ಭದ್ರತೆಯ ಪ್ರಶ್ನೆ ಎಂದು

ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಇದು ಜನರ ಬದುಕಿನ ಪ್ರಶ್ನೆಕೂಡ ಎಂದು ನಾವು ಹೇಳಿದೆವು. ಅಂತಿಮವಾಗಿ ನಮ್ಮ ಬಳಿಗೆ ಅವರು ಬರುವುದು ಅನಿವಾರ್ಯವಾಯಿತು. ಇದನ್ನೇ ವುಲ್ಫೆನ್ಸನ್ ತಮ್ಮ ಪ್ರತಿಷ್ಠೆಯಾಗಿಸಿಕೊಂಡು ತಾವು ಜನರ ಬಳಿಗೆ ಹೋಗಿದ್ದಾಗಿ ನಂತರ ಹೇಳಿಕೊಂಡರು. ಹಾಗಾಗಿ ಹೋರಾಟ ದೊಡ್ಡ ಸಮಸ್ಯೆಯೇನಲ್ಲ. ಸರಿಯಾದ ರೀತಿಯಲ್ಲಿ ಕೂಟ ರಚಿಸಿ ಹೋರಾಟ ಮಾಡಿದರೆ, ಖಂಡಿತಾ ಯಶಸ್ಸು ಸಾಧ್ಯ. ಬಡವರು, ಕೈಲಾಗದವರಿಂದ ಕೂಡ ನಾವು ಸಶಕ್ತ ಹೋರಾಟವನ್ನು ಸಂಘಟಿಸಬಹುದು. ನರ್ಮದಾ ಬಚಾವೋ ಆಂದೋಲನ ದೇಶಕ್ಕೆ ಮಾದರಿ ಎಂದು ನಾನು ಭಾವಿಸುತ್ತೇನೆ.

● *ಹಲವಾರು ಕಾರಣಗಳಿಗಾಗಿ ನರ್ಮದಾ ಬಚಾವೋ ಆಂದೋಲನ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮುದಾಯದ ಗಮನವನ್ನು ಸೆಳೆದುಕೊಂಡಿದೆ. ಇಂಥ ಸಶಕ್ತ ಆಂದೋಲನವನ್ನೇ ದೇಶದ ನ್ಯಾಯಾಂಗ ತನ್ನ ತೀರ್ಪಿನ ಮೂಲಕ ಹತ್ತಿಕ್ಕಲು ಪ್ರಯತ್ನಿಸುತ್ತಿರುವಾಗ, ಅಶಕ್ತ ಅಸಂಘಟಿತ ಆಂದೋಲನಕ್ಕೆ ಇದು ಯಾವ ಸಂದೇಶವನ್ನು ನೀಡುತ್ತದೆ?*

ಮೇಧಾ : ಅವು ಅಶಕ್ತ ಸಂಘಟನೆಗಳಲ್ಲ. ಹೆಚ್ಚು ಸ್ಥಳೀಯವಾದವು. ನ್ಯಾಯಾಂಗದ ತೀರ್ಪು ಅವುಗಳನ್ನು ಮುಗಿಸಿಬಿಡುವಷ್ಟು ಸಶಕ್ತವಾಗಿದೆ ಎನ್ನುವುದೆ ಸರಿ. ಸಣ್ಣದೋ, ದೊಡ್ಡದೋ, ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿಟ್ಟು, 'ನೀವು ಕಾರ್ಯಾಂಗವನ್ನು ಪ್ರಶ್ನಿಸುವಂತಿಲ್ಲ ಎಂದಿದೆ. ಕಾರ್ಯಾಂಗದ ನಿರ್ಧಾರವನ್ನು ಆಳವಾಗಿ ಪರಿಶೀಲಿಸಿ, ನ್ಯಾಯ ದೊರಕಿಸುವ ಬದಲಿಗೆ ಕಾರ್ಯಾಂಗ ಹಾಗೂ ಶಾಸಕಾಂಗದ ನ್ಯಾಯಬದ್ಧವಲ್ಲದ ತೀರ್ಮಾನವನ್ನು ಎತ್ತಿಹಿಡಿದಿದೆ. ಕಾರ್ಯಾಂಗ ತೆಗೆದುಕೊಂಡ ನಿರ್ಧಾರವನ್ನು ಯಾರಾದರೂ ತಡವಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ, ಅದನ್ನು ಪರಿಗಣಿಸಕೂಡದು ಎಂದು ಯಾವ ತೀರ್ಪು ಹೇಳುತ್ತದೆ. ಈ ಮೂಲಕ ನ್ಯಾಯಾಂಗ ತಾನು ಕಾರ್ಯಾಂಗದ ವ್ಯಾಪ್ತಿಯಲ್ಲಿ ಪ್ರವೇಶಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಪರಿಸ್ಥಿತಿ ಹೀಗಿರುವಾಗ ನ್ಯಾಯಾಂಗದ ಬಾಗಿಲು ಮುಚ್ಚಿ ಎಂದು ಜನರು ಹೇಳಬೇಕಾದ ಪರಿಸ್ಥಿತಿ ಎದುರಾಗುತ್ತದೆ.

ಇದು ನಿಜಕ್ಕೂ ಸಂದಿಗ್ಧ ಪರಿಸ್ಥಿತಿ. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದು ಕರೆಯುವ ಮೂಲಕ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ಅಭಿಪ್ರಾಯವನ್ನು ನ್ಯಾಯಾಂಗ ಹೊಂದಿದೆ. ಜನಾಂದೋಲನವನ್ನು ಲೇವಡಿ ಮಾಡುವ ಮೂಲಕ ಅದರ ವಿರುದ್ಧವಾದ ಅಭಿಪ್ರಾಯವನ್ನು ರೂಪಿಸುತ್ತಿದ್ದಾರೆ. ಬುಡಕಟ್ಟಿನ ಜನಾಂಗದವರ ಬದುಕನ್ನು ಲೇವಡಿ ಮಾಡಿದ್ದಾರೆ. ಈ ರೀತಿ ಮಾಡುವ ಮೂಲಕ ತಮ್ಮ ಅಜ್ಞಾನವನ್ನು ಬಹಿರಂಗಪಡಿಸಿದ್ದಾರೆ. ಪ್ರಾಕೃತಿಕ ಸಂಪತ್ತನ್ನು ಆಧರಿಸಿದ ಆರ್ಥಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಹಾಗಾಗಿ ಪ್ರಾಕೃತಿಕ ಸಂಪತ್ತನ್ನು ಆಧರಿಸಿದ ಅರ್ಥ ವ್ಯವಸ್ಥೆಯನ್ನು ನಂಬಿರುವ ಬಹುಮಂದಿ 'ನಮ್ಮ ಬದುಕಿನ ಬಗ್ಗೆ ತೀರ್ಮಾನ ನೀಡಲು ಅವರಿಗೆ ಹಕ್ಕಿಲ್ಲ, ನಮ್ಮ ಬದುಕಿನೊಂದಿಗೆ ಚೆಲ್ಲಾಟವಾಡುವಂಥ ತೀರ್ಮಾನದ ಬಗ್ಗೆ ತೀರ್ಪು ನೀಡಲು ಸಾಧ್ಯವಿಲ್ಲ. ಅವರಿಗೆ ಇದಕ್ಕೆ ಅಗತ್ಯವಾದ ಜ್ಞಾನ ಹಾಗೂ ತಿಳುವಳಿಕೆ ಇಲ್ಲ' ಎಂದು ಹೇಳಬೇಕಾಗುತ್ತದೆ.

ಒಂದು ಕಡೆ ತೀರ್ಪಿನಿಂದ ಆಂದೋಲನ ಗಂಟಲು ಹಿಸುಕಿದಂತೆ ಕಾಣಬಹುದು. ಆದರೆ ಇನ್ನೊಂದು ಕಡೆ ಇನ್ನು ಮುಂದೆ ಆಂದೋಲನಗಳು ನ್ಯಾಯಾಲಯದ ಕಟ್ಟೆ ಏರುವ ಮುನ್ನ ಇನ್ನೂ ಹೆಚ್ಚು ಎಚ್ಚರವಾಗಿರುತ್ತವೆ. ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಹೊಸ ಮಾದರಿಗಳನ್ನು ಹುಡುಕಿಕೊಳ್ಳುತ್ತಾರೆ. ಹಾಗೆ ನೋಡಿದರೆ, ನ್ಯಾಯಾಂಗ ಸಂವಿಧಾನದ ಮೂರನೆ ಅಂಗ. ಅಂಥ ಮಹಾನ್ ಸಂಸ್ಥೆ ಏನಲ್ಲ. ಜನಾಂಗದ ಸಾಕ್ಷಿ ಪ್ರಜ್ಞೆಯೂ ಅಲ್ಲ. ಇದು ಕಾರ್ಪೊರೇಟ್ ಜಗತ್ತು ಹಾಗೂ ರಾಜಕಾರಣವನ್ನು ಹೆಚ್ಚುಹೆಚ್ಚಾಗಿ ಅವಲಂಬಿಸಿದೆ.

● *ಇನ್ನೊಂದು ದೃಷ್ಟಿಯಲ್ಲಿ ನೋಡಿದರೆ, ಭಾರತೀಯ ನಗರಗಳು, ಹಳ್ಳಿಗಳ ಜನರು ಸಂಪನ್ಮೂಲಗಳಿಂದ ಸಾಕಷ್ಟು ಕಿತ್ತುಕೊಂಡಿದೆ. ಈ ಸಂಪನ್ಮೂಲಗಳನ್ನು ಹೆಚ್ಚಾಗಿಯೇ ಶೋಷಿಸಿದ್ದಾರೆ ಎನ್ನಬೇಕು. ಇದರ ಕೊನೆ ಎಲ್ಲಿ. ಈ ರೀತಿ ಸಂಪನ್ಮೂಲಗಳ ಶೋಷಣೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೇ?*

ಮೇಧಾ : ಇದಕ್ಕೆ ಅಂತ್ಯ ಅಷ್ಟು ಸುಲಭವಾಗಿ ಕಾಣುತ್ತಿಲ್ಲ. ಆದರೆ ನಗರ ಮತ್ತು ಹಳ್ಳಿಗಳ ನಡುವಿನ ಘರ್ಷಣೆ ಕಾಣಿಸಿಕೊಳ್ಳುತ್ತಿದೆ. ನಗರಗಳು ಹಳ್ಳಿಗಳನ್ನು ತಮ್ಮ ವಸಾಹತುಗಳೆಂದು ಬಳಸಿಕೊಳ್ಳುತ್ತಿರುವುದರ ವಿರುದ್ಧ ಗ್ರಾಮದ ಜನರು ಹಾಗೂ ಸಂಘಟನೆಗಳು ಧ್ವನಿ ಎತ್ತುವುದು ಇಂದು ಅತ್ಯಗತ್ಯವಾಗಿದೆ. ಜಾಗತೀಕರಣ ವ್ಯವಸ್ಥೆಯಲ್ಲಿ ಅಸಂಘಟಿತ ಶೇ. 94ರಷ್ಟು ಜನ ಮುಖ್ಯವಲ್ಲ. ಅಸಂಘಟಿತ ಶೇ. 7ರಷ್ಟು ಜನ ಮಾತ್ರ ಮುಖ್ಯ. ಅವರೂ ಕೂಡ ಇಂದು ಬದುಕಿಗಾಗಿ ನಿರ್ವಹಿಸಿತರಾಗುವಂಥ ಸ್ಥಿತಿ ಬಂದಿದೆ.

ಜನಪರ ಆಂದೋಲನ, ಪರಿಸರವಾದಿಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಒಂದೇ ವೇದಿಕೆಗೆ ಬರಬೇಕಾದ ಅಗತ್ಯವಿದೆ. ಆದೂ ಕೂಡ ಅಷ್ಟು ಸುಲಭದ ಮಾತಲ್ಲ. ಅವರ ದೃಷ್ಟಿಕೋನಗಳು ಭಿನ್ನವಾಗಿರುತ್ತವೆ. ನೀರಿನ

ನಿರ್ವಹಣೆಗೆ ಹೇಗೆ ಎಂದು ಇದುವರೆಗೆ ಯಾವ ಸಾರ್ವಜನಿಕ ಉದ್ದಿಮೆಯ ಕಾರ್ಮಿಕರು ಚಿಂತಿಸಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ಉದ್ದಿಮೆಗಳ ನಡುವಿನ ಸಮತೋಲನ ಹೇಗೆ ಸಾಧಿಸಬೇಕೆಂಗದು ಯಾವುದೇ ಪರಿಸರ ಪ್ರಿಯರೂ ಯೋಚಿಸಿಲ್ಲ. ಅವರು ಏನೇ ಆಗಲಿ ಕಾಡು ಉಳಿಯಬೇಕು ಎನ್ನುತ್ತಾರೆ. ಹಾಗಾಗಿ ಕೆಲವು ವ್ಯಕ್ತಿಗಳು ಹಾಗೂ ಸಂಘಟನೆಗಳು ಈ ಸಂಗತಿಗಳನ್ನು ಅರ್ಥಮಾಡಿಕೊಂಡು, ವಿಶಾಲವಾದ ದೃಷ್ಟಿಕೋನ ಬೆಳೆಸಿಕೊಂಡಲ್ಲಿ ಮಹತ್ವದ ಪಾತ್ರವನ್ನು ವಹಿಸಬಹುದು. ಆದರೆ ಇದು ಹೇಗೆ ಸಾಧ್ಯ? ಎನ್ನುವುದು ನಿಜವಾದ ಸವಾಲು.

● *ನಿಮ್ಮ ಜೀವನದ ಗತಿಯನ್ನೇ ಬದಲಿಸಿ, ನೀವು ಇಂದು ಕೈಗೊಂಡಿರುವ ಕೆಲಸಕ್ಕೆ ನಿಮ್ಮನ್ನು ಸೆಳೆಯುವಂಥ ಒಂದು ಮಹತ್ವದ ಘಟನೆ ಯಾವುದು?*

ಮೇಧಾ : ಹಾಗೇನೂ ಇಲ್ಲ, ಹಲವು ವರ್ಷಗಳಲ್ಲಿ ಆದ ಬದುಕಿನ ಪ್ರಕ್ರಿಯೆಯಲ್ಲಿ ಆದದ್ದು ಇದು. ನಮ್ಮ ಮನೆಯಲ್ಲಿ ಚರ್ಚೆಯಾಗುತ್ತಿದ್ದ ಸಂಗತಿಗಳು ಇವೇ. (ನಗು) ಆಭರಣಗಳ ಬಗ್ಗೆಗಾಗಲಿ, ಮತ್ತಾವುದೇ ಸಂಗತಿಗಳು ಚರ್ಚೆಯಾಗುತ್ತಿರಲಿಲ್ಲ. ಅದರ ಪರಿಣಾಮವಾಗಿ ಹೀಗಾಗಿದೆ. ನನ್ನ ಮಟ್ಟಿಗೆ ಇದು ಸಹಜವಾಗಿಯೇ ಘಟಿಸಿದ್ದು. ನನ್ನ ತಂದೆ ಸ್ವಾತಂತ್ರ್ಯ ಹೋರಾಟಗಾರರು ಹಾಗೆಯೇ ಕಾರ್ಮಿಕ ನಾಯಕರು. ಹಾಗಿದ್ದೂ ಅವರು ಭಿನ್ನವಾಗಿದ್ದರು. ಅವರು ಹೊಸ ಸಂಗತಿಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಿದ್ದರು. ಅವರು ಪರಿಸರ ಚಳವಳಿಯಿಂದ ಕಾರ್ಮಿಕ ಚಳವಳಿಯವರೆಗೆ ಹಲವು ಸಂಗತಿಗಳನ್ನು ಕುರಿತು ಬರೆದಿದ್ದಾರೆ.

ಇನ್ನುಳಿದ ಕುಟುಂಬಗಳಲ್ಲಿ ಮುಂದಿನ ಭವಿಷ್ಯದತ್ತಲೇ ಎಲ್ಲ ಚಿಂತನೆಗಳೂ ನಡೆಯುತ್ತಿರುತ್ತವೆ. ನನಗೆ ಸಂಬಂಧಿಸಿದಂತೆ ಇದು ಭಿನ್ನವಾದದ್ದು. ನಿನ್ನ ಭವಿಷ್ಯವನ್ನು ಕಟ್ಟುತ್ತಲೇ ನೀನು ಇತರರಿಗೆ ನೆರವಾಗಬೇಕು. ಅದು ಕೇವಲ ವೈಯಕ್ತಿಕ ಸೇವೆಯ ಸ್ವರೂಪದಲ್ಲಲ್ಲ. ಅದು ಸಾಂಘಿಕ ಮಟ್ಟದಲ್ಲಿ ಎಂಬುದು ನನಗೆ ಕಲಿಸಿದ ಪಾಠ. ಹಾಗಾಗಿ ನನಗೆ ಈ ಹಾದಿ ಹಿಡಿಯಲು ಅನುಕೂಲವಾಯಿತು. ನಾನು ಇದಕ್ಕಿಂತ ಭಿನ್ನವಾದುದೇನನ್ನೂ ಮಾಡುತ್ತಿರಲಿಲ್ಲ. ಜೊತೆಯಲ್ಲಿ ಇಂಥ ಪ್ರಯತ್ನದಲ್ಲಿ ಜನರು ಕೂಡ ಹೆಚ್ಚಿನ ಶಕ್ತಿ ನೀಡುತ್ತಾರೆ.

ದೂರದಲ್ಲಿರುವವರನ್ನು ನೋಡಿ, ಅವರೆಂದೂ ತಮ್ಮ ಸಂಚೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸುವುದಿಲ್ಲ. ಈಗಲೂ ಅದಕ್ಕೆ ಅಂಟಿಕೊಂಡಿದ್ದೀಯಾ?, ಎಂದು ಕೇಳುತ್ತಾರೆ. ಇದರರ್ಥ ನಾವು ಹೊರಗೆ ಹೋಗುವುದಿಲ್ಲ ಎಂದಲ್ಲ. ಇತ್ತೀಚೆಗೆ ದಿನಗಳಲ್ಲಿ ನಾನು ಎಷ್ಟು ಪ್ರವಾಸ ಮಾಡುತ್ತೇನೆ ಎಂಬುದನ್ನು ನೀವು ನೋಡಿದ್ದೀರಲ್ಲ. ಅದು ಅಗತ್ಯ. ಆದರೆ ನನ್ನ ಬೇರುಗಳಿರುವುದೆಲ್ಲ ಇಲ್ಲಿ. ಈ ಸಂಬಂಧಗಳು ನನಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತವೆ. ಇಲ್ಲಿ ಮಾತನಾಡುವ ಕಾರ್ಯಕರ್ತರೇ ಮುಖ್ಯವಲ್ಲ. ಆಂದೋಲನದಲ್ಲಿರುವ ಜನರು ಈ ಕಾರ್ಯಕರ್ತರಿಗಿಂತ ಹೆಚ್ಚು ಗಟ್ಟಿಯಾಗಿದ್ದು, ಚಳವಳಿ ಮುನ್ನಡೆಯುವಂತೆ ನೋಡಿಕೊಳ್ಳುವ ಹೊಣೆ ಹೊತ್ತಿರುತ್ತಾರೆ. ನ್ಯಾಯಾಲಯದ ತೀರ್ಪು ಬಂದಾಗ ನಾನು ಕುಸಿದಿದ್ದೆ. ಅವರು ಮತ್ತೆ ನನ್ನನ್ನು ಜೀವಂತವಾಗಿಸಿದರು. 'ಪರವಾಗಿಲ್ಲ. ನ್ಯಾಯಾಲಯ ನಮ್ಮ ಪರವಾಗಿಲ್ಲ ಎಂದು ಮೊದಲೇ ನಮಗೆ ಗೊತ್ತಿತ್ತು' ಎಂದು ಅವರು ಹೇಳಿದರು.

○

ಯುದ್ಧ ಪ್ರದೇಶದಲ್ಲಿ ಮುಗ್ಧ ಹುಡುಗಿಯರ ಮೇಲೆ ಅತ್ಯಾಚಾರವೆಸಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇತ್ತೀಚಿಗಿನ 'ದಿ ಪಯನಾರ್' ಪತ್ರಿಕೆಯ ವರದಿಯ ಪ್ರಕಾರದ ಅಂಕಿ ಅಂಶಗಳು ಭೀಕರವಾಗಿವೆ. 1998ರಲ್ಲಿ 800 ಪ್ರಕರಣಗಳು ದಾಖಲಾಗಿದ್ದರೆ, 1999ರಲ್ಲಿ 900ಕ್ಕಿಂತ ಹೆಚ್ಚಿದೆ. ಇದರಲ್ಲಿ ಸಾಮಾಜಿಕ ಹಾಗೂ ಕೌಟುಂಬಿಕ ಪ್ರಕರಣಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಹಾಗೇನಾದರೂ ಆಗಿದ್ದರೆ ಉಹಿಸಲು ಸಾಧ್ಯವಾದ ಪ್ರಕರಣಗಳು ಬೆಳಕಿಗೆ ಬರುತ್ತಿದ್ದವೆಂಬುದರ ಬಗ್ಗೆ ನಮಗೆ ಅನುಮಾನವೇ ಇಲ್ಲ.

* * *

ಜಪಾನಿನಲ್ಲಿ ಬಹುತೇಕ ತರುಣ ದಂಪತಿಗಳು ವಂಶೋದ್ಧಾರಕಿಯರನ್ನೇ ಹೊಂದಲು ಆಶಿಸುತ್ತಿದ್ದಾರೆ. ಉಂಡಾಡಿ ಗಂಡು ಕುಲಕ್ಕಿಂತ ಅಕ್ಕರೆಯ, ಭಾವುಕ ಹೆಣ್ಣು ಮಗಳ ಬಳಿ ವೃದ್ಧಾಪ್ಯ ಸುರಕ್ಷಿತ ಎಂಬ ನಿಲುವಿಗೆ ಪ್ರತಿಶತ 75ರಷ್ಟು ಜೋಡಿ ಬಂದಿರುವುದು ಹಾಗೂ ಹೆಣ್ಣು ಹೆರಲು ಆದ್ಯತೆ ನೀಡಿರುವುದು ಶುಭ ಸೂಚನೆ ಎನ್ನೋಣವೇ, ಅಥವಾ ಪುರುಷ ಅಹಂಗೆ ಆಗಿರುವ ಪೆಟ್ಟೋ ನೀವೇ ನಿರ್ಧರಿಸಿ.

ಮಲಯಾಳ ಸಣ್ಣಕತೆಗಳಲ್ಲಿ ಸ್ತ್ರೀವಾದ ಬೆಳೆದು ಬಂದ ಬಗೆ

ಕನ್ನಡಕ್ಕೆ : ಪಾರ್ವತಿ ಜಿ. ಐತಾಳ್
ಮೂಲ : ಡಾ. ಮಿನಿ ಪ್ರಸಾದ್

ಮಲಯಾಳ ಸಣ್ಣಕತೆಗಳಲ್ಲಿ ಸ್ತ್ರೀ ಸಂವೇದನೆಯು ಮೊತ್ತ ಮೊದಲ ಬಾರಿಗೆ ಪ್ರಕಟವಾದದ್ದು ಸಾವಿರದ ಒಂಬೈನೂರ ಮೂವತ್ತರ ದಶಕದಲ್ಲಿ-ಲಲಿತಾಂಬಿಕಾ ಅಂತರ್ಜನರ ಕತೆಗಳಲ್ಲಿ ನಂಬೂದಿರಿ ಸಮಾಜದ ನವೋದಯದ ಕುರಿತಾಗಿ ಬರೆದ ತಮ್ಮ ಕತೆಗಳಲ್ಲಿ ಅವರು ವ್ಯವಸ್ಥೆಯ ವಿರುದ್ಧ ದನಿಯೆತ್ತಿದ್ದರು. ಹೆಣ್ಣು ಗಂಡಿನ ತಾಳಕ್ಕೆ ಕುಣಿಯುವ ಕೀಲುಗೊಂಬೆಯಲ್ಲ, ಬದಲಾಗಿ ಯೋಚಿಸುವ ಶಕ್ತಿ ಮತ್ತು ಕನಸು ಕಾಣುವ ಮನಸ್ಸುಗಳಿಂದ ಒಂದು ವ್ಯಕ್ತಿತ್ವವುಳ್ಳವಳೆಂಬ ಸತ್ಯವನ್ನು ಸಮಾಜಕ್ಕೆ ತಿಳಿಯಪಡಿಸುವ ಹೊಣೆ ತಮ್ಮದಾಗಿದೆಯೆಂದು ಅವರು ನಂಬಿದ್ದರು. ಆ ಕಾಲದ ಅಂತರ್ಜನ ಸಮುದಾಯದ ಜೀವನದ ರೀತಿನೀತಿಗಳನ್ನು ಅವರು ತಮ್ಮ ಕತೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದರು. ಬರಹಗಾರ್ತಿಯಾಗಿ ಒಬ್ಬ ಸ್ತ್ರೀಯು ಎದುರಿಸುವ ಕಷ್ಟಗಳೂ ಸಮಸ್ಯೆಗಳೂ ಆ ಕಾಲದಲ್ಲಿ ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಮನೆಯೊಳಗಿನ ಕೆಲಸಗಳನ್ನು ನಿಭಾಯಿಸಿಕೊಂಡು, ಮನೆಗೆ ಬರುವ ಅತಿಥಿಗಳನ್ನೂ ಸತ್ಕರಿಸಿದ ನಂತರ ಸಿಗುವ ಅತಿ ಕಡಿಮೆ ಸಮಯುವನ್ನು ಸಾಹಿತ್ಯ ರಚನೆಗಾಗಿ ವಿನಿಯೋಗಿಸಬೇಕಾಗಿದ್ದ ಆ ಅಸಹಾಯಕತೆಯನ್ನು ಲಲಿತಾಂಬಿಕಾ ಅಂತರ್ಜನರು ತಮ್ಮ 'ಇದು ತರವೇ?' ಎಂಬ ಕತೆಯಲ್ಲಿ ಮನಮುಟ್ಟುವಂತೆ ವರ್ಣಿಸಿದ್ದಾರೆ. ಸ್ತ್ರೀಯರ ಸಮಸ್ಯೆಯ ಕುರಿತು ಮೊದಲ ಬಾರಿಗೆ ಪ್ರಶ್ನೆ ಎತ್ತಿದ ಕತೆ ಇದು ಎಂಬ ಕಾರಣಕ್ಕೆ ಈ ಕತೆ ವಿಶೇಷವಾಗಿ ಗಮನ ಸೆಳೆಯುತ್ತದೆ.

ಜಾತಿ, ಮತ ಹಾಗೂ ವರ್ಗಗಳ ಸಮಸ್ಯೆಗಳನ್ನು ಮೀರಿ ನಿಂತಿರುವ ಲಿಂಗಾಧಾರಿತ ಅಸಮಾನತೆಯನ್ನು ಪ್ರತಿಭಟಿಸಿದ ಇನ್ನೋರ್ವ ಕತೆಗಾರ್ತಿ ಕೆ. ಸರಸ್ವತಿಯಮ್ಮ. ಸ್ವತಂತ್ರ ವ್ಯಕ್ತಿತ್ವವನ್ನು ಸ್ಥಾಪಿಸಲು ಹೆಣ್ಣು ನಡೆಸಿದ ಹೋರಾಟದ ಕತೆ ಆರಂಭವಾಗುವುದು ಸರಸ್ವತಿಯಮ್ಮನ ಕತೆಗಳಲ್ಲಿ. ಲಲಿತಾಂಬಿಕಾ ಅಂತರ್ಜನರ ಭಾವುಕ ಉದ್ವೇಗಕ್ಕೆ ಹೋಲಿಸಿದಾಗ ಸರಸ್ವತಿಯಮ್ಮನ ಸೈದ್ಧಾಂತಿಕ ನಿಲುವುಗಳು ಹೆಚ್ಚು ಬೌದ್ಧಿಕವಾಗಿ ಕಾಣಿಸುತ್ತವೆ. ತನ್ನ ಪರಿಸ್ಥಿತಿಯಲ್ಲಿ ಬದಲಾವಣೆಯನ್ನು ತಂದುಕೊಳ್ಳಲು ಅಥವಾ ಪುರುಷನ ದಬ್ಬಾಳಿಕೆಯಿಂದ ಮುಕ್ತಳಾಗಲು ಪ್ರಯತ್ನಿಸದೇ ಇರುವ ಒಬ್ಬ ಸ್ತ್ರೀಯ ಗುಲಾಮೀ ಮನೋಭಾವವನ್ನ ಸರಸ್ವತಿಯಮ್ಮ ಪ್ರತಿವಾದಿಯ ಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆ ನಡೆಸುತ್ತಾರೆ. 'ರಮಣಿ' 'ಮಧುರ ಫಲಾಹಾರಂ' ಮೊದಲಾದ ಕತೆಗಳಲ್ಲಿ ಆಕೆಯ ಈ ವಿಚಾರಣಾ ಶೈಲಿಯನ್ನು ನೋಡಬಹುದು. ಇಂತಹ ಆತ್ಮವಿಮರ್ಶೆಯ ಪ್ರಸ್ತುತಿಯಿಂದಾಗಿಯೇ ಈ ಕತೆಗಳು ವಿಶಿಷ್ಟವೆನ್ನಿಸಿಕೊಳ್ಳುತ್ತವೆ.

ಗೃಹಕೃತ್ಯದ ಪರಿಧಿಯಾಚೆ ಉದ್ಯೋಗಸ್ಥೆಯರಾದ ಸ್ತ್ರೀ ಪಾತ್ರಗಳನ್ನು ಮೊದಲ ಬಾರಿಗೆ ಸೃಷ್ಟಿಸಿದ್ದು ರಾಜಲಕ್ಷ್ಮಿಯವರ ಕತೆಗಳು. ಮನೆಯಲ್ಲಿ ಹಿರಿಯ ಹೆಣ್ಣುಮಗಳಾಗಿ ಹುಟ್ಟಿದವರು ಹಾಲುಕರೆಯುವ ಹಸುಗಳಾಗಿ, ಅವರು ತಮ್ಮ ಕನಸುಗಳನ್ನು ಒಡಲಾಳದಲ್ಲಡಗಿಸಿಕೊಂಡು ಕೊರಗುವುದನ್ನು ರಾಜಲಕ್ಷ್ಮಿಯವರು ಚಿತ್ರಿಸುತ್ತಾರೆ. ಸಮಾಜದ ರೀತಿ ನೀತಿಗಳನ್ನು ಹಸಿಹಸಿಯಾಗಿ ವರ್ಣಿಸುವಾಗ ಕಟುಟೀಕೆಯ ವ್ಯಂಗ್ಯ ಬಾಣಗಳನ್ನೆಸೆಯುವ ರಾಜಲಕ್ಷ್ಮಿಯವರು ಈ ಪುರುಷ ಪ್ರಧಾನ ಸಮಾಜದ ಕ್ರೂರ ನೀತಿಗಳು ಹೇಗೆ ಹೆಣ್ಣಿನ ಅಸ್ತಿತ್ವವನ್ನೇ ಇಲ್ಲವಾಗಿಸುತ್ತವೆಯೆಂಬುದನ್ನು ದೃಷ್ಟಾಂತ ಸಮೇತವಾಗಿ ತಮ್ಮ ಕತೆಗಳಲ್ಲಿ ನಿರೂಪಿಸುತ್ತಾರೆ.

ಪ್ರೀತಿಯೆನ್ನುವುದು ಸಂಪೂರ್ಣವಾಗಿ ವ್ಯಕ್ತಿಯ ಸ್ವಂತ ನಿರ್ಧಾರದ ಮೇಲೆ ಅವಲಂಬಿತವಾಗಿದೆಯೆಂದು ನಂಬುವ ಮಾಧವಿ ಕುಟ್ಟಿಯವ(ಕಮಲಾದಾಸ್)ರು ಸಾಮಾಜಿಕ ನೀತಿ ನಿಯಮಗಳ ಕಟ್ಟುಪಾಡಿಗೊಳಗಾಗಿ ಅದನ್ನು ಇತರರೊಂದಿಗೆ ಹಂಚಿಕೊಳ್ಳಲಾಗದೆ ಅಸಹಾಯತರಾಗುವ ಪಾತ್ರಗಳನ್ನು ತಮ್ಮ ಕತೆಗಳಲ್ಲಿ ಸೃಷ್ಟಿಸುತ್ತಾರೆ. 'ಪ್ರೀತಿ' ಎನ್ನುವ ಎರಡಕ್ಷರಗಳು ಈ ಕತೆಗಾರ್ತಿಗೆ ಅದ್ಭುತವಾಗಿ ತೋರುತ್ತವೆ; ಭಾವಪರವಶಳಾಗಿ ಮಾಡುತ್ತವೆ. ಸದಾ ತಾನು ಒಂಟಿಯೆಂಬ ಭಾವನೆ, ಮತ್ತು ಪ್ರೀತಿಯ ನಲ್ನುಡಿಗಳಿಗಾಗಿ ಪರಿತಪಿಸುವ ಮನೋಭಾವ ಹಾಗೂ ಅವುಗಳ ನಿರಂತರ ಅನ್ವೇಷಣೆಗಳಲ್ಲಿ ಇವರ ಕತೆಗಳು ಮೈದುಂಬಿ ನಿಲ್ಲುತ್ತವೆ. 'ಚದುರಂಗ' 'ಸೂರ್ಯ' 'ಜಗತ್ತು ಓರ್ವ ಕವಯಿತ್ರಿಯನ್ನು ಸೃಷ್ಟಿಸುತ್ತದೆ' ಎಂಬೀ ಕತೆಗಳಲ್ಲಿ ಈ ಯಾತನಾಭರಿತ ಹುಡುಕಾಟವನ್ನು ನಾವು ಕಾಣಬಹುದು. ವಿವಾಹಿತ ಸ್ತ್ರೀಯ ಪ್ರೀತಿಯ ಹುಡುಕಾಟವನ್ನು ಚಿತ್ರಿಸುವ ಮೂಲಕ ಕುಟುಂಬವೆನ್ನುವ ವ್ಯವಸ್ಥೆಯ ಟೊಳ್ಳುತನವನ್ನು ಮಾಧವಿಕುಟ್ಟಿಯವರು ಬಯಲಿಗೆಳೆಯುತ್ತಾರೆ. ಆದರೆ ಹೆಣ್ಣಿನ

ಮನದಾಳದಲ್ಲಿ ಹುದುಗಿದ ಅತ್ಯಂತ ನೈಜ ಹಾಗೂ ಸಹಜವಾದ ಪ್ರೀತಿಯ ಈ ಬಯಕೆಯನ್ನು ಮಿತಿಮೀರಿದ ಕಾಮಾವೇಶ ವೆಂಬುದಾಗಿ ತಪ್ಪಾಗಿ ತಿಳಿದು ಮಲಯಾಳ ಸಾಹಿತ್ಯವು ಈ ಕಥೆಗಳನ್ನು ಜನರಿಂದ ದೂರವಿಟ್ಟಿತು.

ಕಾಲ ಮತ್ತು ದೇಶಗಳಿಗನುಗುಣವಾಗಿ ಸಾಹಿತ್ಯ ಸೃಷ್ಟಿಗಳನ್ನು ವಿಭಜಿಸುವುದು ಅಸಾಧ್ಯವಾದರೂ ಅಭ್ಯಾಸಕ್ಕೆ ಬೇಕಾದ ಅನುಕೂಲತೆಯ ದೃಷ್ಟಿಯಿಂದ ಇಂತಹ ಒಂದು ವ್ಯವಸ್ಥೆ ಅನಿವಾರ್ಯ. ಮೂಲವನ್ನು ಶೋಧಿಸ ಹೊರಟರೆ ಮಲಯಾಳ ಕತೆಗಳಲ್ಲಿ ಸ್ತ್ರೀ ಪ್ರಜ್ಞೆಯು ಅರಿವಿನ ಘಟ್ಟವನ್ನು ದಾಟಿ ಪ್ರತಿಭಟನೆಯ ಹಂತವನ್ನು ತಲುಪುವುದು ಪಿ. ವತ್ಸಲಾರ ಕತೆಗಳಲ್ಲಿ ಸಮಕಾಲೀನ ಸಮಾಜದ ಬದುಕನ್ನು ವಿಮರ್ಶಿಸುವ 'ಪರಶುತುರದ ಸಂತೆ'ಯಂತಹ ಕತೆಗಳು ಮಲಯಾಳದಲ್ಲಿ ಹೆಚ್ಚಿಲ್ಲ. ಅಸಂತೃಪ್ತವೂ, ವತ್ಸಲಾರ ಎಲ್ಲಾ ಕಥಾ ಪಾತ್ರಗಳು ಅತ್ಯಂತ ವಿಶಿಷ್ಟ ರೀತಿಯಲ್ಲಿ ಬಿಂಬಿಸುತ್ತವೆ. 'ಅರುಂಧತಿ ಅಳುವುದಿಲ್ಲ', 'ಒಂದೇ ಒಂದು ದಾರಿ' ಇತ್ಯಾದಿ ಕತೆಗಳನ್ನು ಇಲ್ಲಿ ಉದಾಹರಿಸಬಹುದು. ಉದ್ಯೋಗ ಗೃಹಕೃತ್ಯ ಗಳೆರಡನ್ನೂ ನಿಭಾಯಿಸುವ ದ್ವಂದ್ವವ್ಯಕ್ತಿತ್ವವನ್ನು ಬಿಂಬಿಸುವ ಗಾಡಿ ಎತ್ತುಗಳ ರೂಪಕವು ಮಲಯಾಳ ಸಾಹಿತ್ಯವನ್ನು ಪ್ರವೇಶಿಸಿದ್ದು ವತ್ಸಲಾರ ಕತೆಗಳ ಮೂಲಕವೇ. ಇಂದು ಸ್ತ್ರೀವಾದವು ಯಥಾಸ್ಥಿತಿ ವಾದದ ಜತೆಗೆ ಸೇರಿ ಹೊಸತೊಂದು ಸಿದ್ಧಾಂತವು ವಿಶ್ವಸಾಹಿತ್ಯದಲ್ಲಿ ರೂಪುಗೊಂಡಿದೆ. ಪ್ರಕೃತಿಯು ಸ್ವಾತಂತ್ರ್ಯದ ಸಂಕೇತವಾಗುವುದನ್ನೂ, ಪ್ರಕೃತಿ ಮತ್ತು ಸ್ತ್ರೀಯ ಸಮಸ್ಯೆಗಳು ಒಂದೇ ನೆಲೆಯಲ್ಲಿ ನಿಂತಿರುವುದನ್ನೂ ವತ್ಸಲಾರ ಕೆಲವು ಕಥೆಗಳು ಪ್ರಸ್ತುತಪಡಿಸುತ್ತವೆ.

ಪ್ರತಿಯೊಂದು ವಿಚಾರದಲ್ಲೂ ತನ್ನ ಶ್ರೇಷ್ಠತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವ ಪುರುಷನ ಮೇಧಾಶಕ್ತಿಯಡಿ ತನ್ನ ಸ್ವಂತ ಶರೀರದ ಕುರಿತಾದ ನಿರ್ಧಾರವನ್ನು ತೆಗೆದುಕೊಳ್ಳುವ ಅವಕಾಶದಿಂದಲೂ ವಂಚಿತಳಾದ ಹೆಣ್ಣಿನ ಜಗತ್ತಿನ ಬಗ್ಗೆ ನಿರ್ಭಯವಾಗಿ ಬರೆಯುವುದೇ ತಮ್ಮ ಗುರಿ ಎನ್ನುವ ಘೋಷಣೆಯೊಂದಿಗೆ ಮುಂದೆ ಬಂದವರು ಸಾರಾ ಜೋಸೆಫ್. ಅಸ್ತಿತ್ವದಲ್ಲಿರುವ ಒಂದು ಭಾಷೆಯಲ್ಲಿ ಕೂಡಾ ಪುರುಷಪ್ರಧಾನ ಸಮಾಜದ ಸೃಷ್ಟಿಯಾಗಿ ಬಿಟ್ಟದ್ದರಿಂದ ನಿಜವಾದ ಸ್ತ್ರೀತ್ವದ ಅಭಿವ್ಯಕ್ತಿಗೆ ಆ ಭಾಷೆ ಅಪರ್ಯಾಪ್ತವೆಂದು ತಿಳಿದ ಅವರು ಹೊಸದೊಂದು ಭಾಷೆಯ ಸೃಷ್ಟಿಗಾಗಿ ಶ್ರಮಿಸಿದರು. ಬರವಣಿಗೆಯೆನ್ನುವುದು ಹೆಣ್ಣಿನ ಪಾಲಿಗೆ ಒಂದು ಮುಳ್ಳಿನ ಕಿರೀಟವೆಂದೂ ಅದನ್ನು ಮುಂದುವರೆಸಿಕೊಂಡು ಹೋಗಬೇಕಾದರೆ ಆಕೆ ಅದೆಷ್ಟು ತ್ಯಾಗ ಮಾಡಬೇಕಾಗಿ ಬರುತ್ತದೆ ಎಂಬುದನ್ನು "ಒಬ್ಬೊಬ್ಬ ಬರಹಗಾರ್ತಿಯ ಒಳಗೂ" ಕೂಡಿ ಇಟ್ಟಿದ್ದ ಆಸೆ-ನಿರಾಸೆಗಳನ್ನು ಚಿತ್ರಿಸುವುದರ ಮೂಲಕ ಸಾರಾ ಜೋಸೆಫ್ ಓದುಗರನ್ನು ಚಿಂತನೆಗೊಳಪಡಿಸುತ್ತಾರೆ. ಉಪಭೋಗ್ ಸಂಸ್ಕೃತಿಯನ್ನು ಕೊಟ್ಟಿರುವ ಸಮಕಾಲೀನ ಸೌಂದರ್ಯ ಸಾಧನಗಳನ್ನು ಪ್ರಬಲವಾಗಿ ಪ್ರತಿಭಟಿಸುವ 'ಬಿಳಿಯ ನಿರ್ಮಿತಿಗಳು ಮತ್ತು ಕಪ್ಪು ಕನ್ನಡಕಗಳು', ಪುರಾಣಗಳ ಆದರ್ಶ ಕಥಾ ಪಾತ್ರಗಳನ್ನು ಸ್ತ್ರೀ ದೃಷ್ಟಿಕೋನದಿಂದ ಸಮಗ್ರವಾಗಿ ಅವಲೋಕಿಸುವ 'ತಾಯ್‌ಕುಲ' 'ಕಪ್ಪುರಂಧ್ರಗಳು' ಇತ್ಯಾದಿ ಕತೆಗಳು ಬಹಳ ಸತ್ವಯುತ ರಚನೆಗಳು. 'ನಿನ್ನನ್ನು ಪುನಃ ಸ್ವೀಕರಿಸಲೆಂದಲ್ಲ, ನನ್ನ ಮತ್ತು ನನ್ನ ವಂಶದ ಮೇಲಾಗಿರುವ ಅಪಮಾನದ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ನಾನು ಯುದ್ಧದಲ್ಲಿ ಜಯಿಸಿದ್ದು' ಎಂಬ ಮಾತುಗಳನ್ನು ರಾಮನಿಂದ ಕೇಳುವ ಸೀತೆ ಪರಾಜಿತ ಮತ್ತು ತನ್ನ ನಡುವೆ ಯಾವುದೇ ವ್ಯತ್ಯಾಸವಿಲ್ಲವೆಂದು ತಿಳಿಯುವುದು (ಅಶೋಕ) ತನ್ನ ಮೊಲೆಹಾಲಿನ ಬೇರುಗಳನ್ನು ಕತ್ತರಿಸಿದವರ ಮೇಲೆ ಸೇಡು ತೀರಿಸಿಕೊಳ್ಳಬಯಸುವ ಶೂರ್ಪನಖಿ (ತಾಯ್‌ಕುಲ) ಇತ್ಯಾದಿ ಕತೆಗಳು ಮಲಯಾಳ ಸಾಹಿತ್ಯಕ್ಕೆ ಸಿಕ್ಕಿದ್ದು ಹೀಗೆ.

ಪುರುಷ ಮತ್ತು ಪುರುಷ ಪ್ರಧಾನ್ಯ ಪರವಾದ ಮೌಲ್ಯ ವ್ಯವಸ್ಥೆ ಸ್ತ್ರೀಯನ್ನೂ ಪ್ರಕೃತಿಯನ್ನೂ ಶೋಷಿಸಿ ಆತ್ಮವನ್ನು ಅಪಹರಿಸಿದ್ದರ ಪರಿಣಾಮವಾಗಿ ಉದ್ಭವಿಸಿದ ಪ್ರತಿಕೂಲ ಪರಿಸ್ಥಿತಿಯ ಮೂಲಕ ಸ್ತ್ರೀವಾದದ ತಳಕಟ್ಟಾದ ಶೋಷಣೆಯನ್ನು ಬೇರು ಸಹಿತ ಕಿತ್ತೊಗೆಯುವ ಅದಮ್ಯ ಹುಮ್ಮಸ್ಸು, ಸಾರಾರವರ ಕತೆಗಳಲ್ಲಿ ಅಡಗಿರುತ್ತದೆ. 'ಅಶೋಕ', 'ತಾಯ್‌ಕುಲ', 'ವನದುರ್ಗ', 'ಕಥೆಯಿಲ್ಲದ್ದು' ಎಂಬೀ ಕತೆಗಳಲ್ಲೆಲ್ಲ ಇದು ಸ್ಪಷ್ಟವಾಗಿ ವ್ಯಕ್ತವಾಗಿದೆ. ರಕ್ತದೋಕುಳಿ ಮುಗಿದು ಹಾಳು ಸುರಿಯುವ ಯುದ್ಧ ಭೂಮಿಯಲ್ಲಿ ಸಿಹಿಯಪ್ಪದ ಮರದ ಬೀಜಗಳನ್ನು ಬಿತ್ತಬಯಸುವ ಅಮ್ಮ ವ್ಯಕ್ತಪಡಿಸುತ್ತಿರುವುದೂ ಇದನ್ನೇ ಜಗತ್ತಿನಲ್ಲಿ ಒಂದೇ ಒಂದು ಮಗುವೂ ಹಸಿದುಕೊಂಡು ನಿದ್ರೆ ಮಾಡುವ ಪ್ರಸಂಗ ಬಾರದೇ ಇರುವಂತಹ ಸಮೃದ್ಧ ಭೂಮಿ ಇದಾಗಬೇಕೆಂಬುದೇ ಬರಹಗಾರ್ತಿಯೊಬ್ಬಳ ಕನಸು ಎಂದು ಸಾರಾ ಹೇಳುತ್ತಾರೆ.

ಚೌಕಗಳನ್ನು ಬರೆದು ಅದರೊಳಗೆ ಕೂಡಿಡುವಂಥದಲ್ಲ ಪ್ರೇಮ ಎಂಬ ಪ್ರಜ್ಞೆಯನ್ನು ಪ್ರಕಟಿಸುವ ಕತೆಗಳು ಮಾನಸಿಯವರದ್ದು. ಪುರುಷ ಮತ್ತು ಸಮಾಜ ಹಾಕಿದ ಗೆರೆಗಳೊಳಗೆ ಹೆಣ್ಣು ತನ್ನ ಜೀವಮಾನ ಪೂರ್ತಿ ಕಳೆಯ

ಬೇಕಾಗಿಲ್ಲವೆಂದು ಇವರ ಕಥಾ ಪಾತ್ರಗಳು ಹೇಳುತ್ತವೆ. 'ಪ್ರೇಮವೆನ್ನುವುದು ಒಂದು ಪರಿಮಳ ಭರಿತ ಹೂವಿನ ಹಾಗೆ ಹುಚ್ಚು ಹಿಡಿಸುವಂಥದ್ದು' ಎಂದು ಧೈರ್ಯವಾಗಿ ಹೇಳುವ ಒಬ್ಬ ಬರಹಗಾರ್ತಿಯನ್ನು ಸಮಾಜವೆಂದೂ ಮನ್ನಿಸುವುದಿಲ್ಲ. ಅಂತೆಯೇ ಮಾನಸಿಯವರ ಕಥೆಗಳನ್ನು ಸಮಾಜ ದೂರವಿಟ್ಟಿತು. ಅಪರೂಪವೆನ್ನಿಸುವಂತಹ ಸ್ವಂತಿಕೆಯಿಂದ ಕಥೆಗಳು ಈಕೆಯವು. ವಿನೋದನ ಅಪ್ಪ ಯಾರೆಂದು ತಿಳಿದು ಅದರಿಂದ ಸಿಗುವಂತಹ ಒಂದು ಸಂಬಂಧದ ಸುರಕ್ಷಿತತೆಯ ಅಗತ್ಯ ತನಗಿಲ್ಲವೆಂದು ನಂಬುವ 'ಸೇತುವೆಯಿಲ್ಲದ ನದಿ'ಯ ಸುಮಾ ಲೋಕನೀತಿಗೆದುರಾಗಿ ನಿಂತವಳು; ಅದರಿಂದಾಗಿ ಒಂಟಿಯಾಗಿ ಬಿಟ್ಟವಳು ಕೂಡಾ. 'ಮುಖದ ತುಂಬ ಚಿಮ್ಮುವ ನಗುವಿನ ಹಿಂದೆ ಬದುಕಿನ ದುಃಖಗಳನ್ನು ಅಡಗಿಸುವವರು ಉಪದೇಶಗಳ ಪಂಜರದೊಳಗೆ ವಿಷದ ಸೂಜಿಗಳಿಂದ ಚುಚ್ಚಿಸಿಕೊಂಡವರು' - 'ಲತಾಳ ಗೆಳೆಯ' ಎಂಬ ಕಥೆಯಲ್ಲಿ ಚಂದ್ರಮತಿ ಎಂಬವಳು ಉಚ್ಚರಿಸುವ ವಾಕ್ಯವಿದು. ಸಾಮಾನ್ಯವಾಗಿ ಬರಹಗಾರ್ತಿಯಾದ ಯಾರೇ ಆದರೂ ಸಮಾಜದ ಬಗ್ಗೆ ವಹಿಸುವ ಎಚ್ಚರಿಕೆಯ ಮನೋಭಾವವನ್ನು ಈ ವಾಕ್ಯ ಸೂಚಿಸುತ್ತದೆ.

ಸಮಾಜ ಮತ್ತು ಹೆಣ್ಣಿನ ಮನಸ್ಸಿನ ನಡುವಣ ಸಂಘರ್ಷವೇ ಚಂದ್ರಮತಿಯವರ ಕಥೆಗಳ ಅಂತರ್ಧಾರೆ. ಉದ್ಯೋಗಸ್ಥೆಯೂ, ಓದುವುದರಲ್ಲಿ ಅತೀವ ಆಸಕ್ತಿ ಹೊಂದಿದವಳೂ ಆದ ಮೇಬಲ್ ಸೈಮನ್ ಮನೆವಾರ್ತೆಯ ಬಗ್ಗೆ ಉದಾಸೀನ ತೋರಿಸಿದ್ದರಿಂದಾಗಿ ಎದುರಿಸಬೇಕಾಗಿ ಬಂದ 'ಜನತಾ ವಿಚಾರಣೆ'ಯು ಇವತ್ತು ಕೂಡಾ ವಿವಾಹವೆಂಬ ಮಾರುಕಟ್ಟೆಯಲ್ಲಿ ಒಂದು ಸರಕಾಗಿ ಮಾರಲ್ಪಡುವ ಒಬ್ಬ ಸ್ತ್ರೀಯ ಸ್ಥಿತಿಯನ್ನು ಪ್ರತಿಬಿಂಬಿಸುವ 'ಪೂರ್ತಿವೈವಾಹಿಕ' ಎಂಬ ಕತೆಯಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಇಂತಹ ಕತೆಗಳ ಮೂಲಕ ಚಂದ್ರಮತಿಯವರು ಸಮಾಜದ ನೈತಿಕ ಪ್ರಜ್ಞೆಯನ್ನು ನೇರವಾಗಿ ಪ್ರಶ್ನಿಸುತ್ತಾರೆ. ಈಕೆಯ ಕತೆಗಳು ಹೊರನೋಟಕ್ಕೆ ಹಾಸ್ಯ ಪ್ರಧಾನವಾಗಿದ್ದು ನಕ್ಕು ನಗಿಸುತ್ತವಾದರೂ ಒಳಗಿನ ಸಂಘರ್ಷಗಳು ಮಾತ್ರ ಸೂಕ್ಷ್ಮ ಓದುಗನ ಗಮನಕ್ಕೆ ಬೀಳದಿರಲು ಸಾಧ್ಯವಿಲ್ಲ. ಸಾಮಾಜಿಕ ನೀತಿ ನಿಯಮಗಳೊಂದಿಗೆ ರಾಜಿ ಮಾಡಿಕೊಳ್ಳಲಾಗದೆ ಒಂದು ತುಣುಕು ಶುಭ್ರ ಆಕಾಶವನ್ನು ನೋಡುವ ಆಸೆಯನ್ನು ಒಳಗೆ ಬೆಳೆಸಿಕೊಂಡು ಬಂದರೂ ರೆಕ್ಕೆಗಳು ತುಂಡಾಗಿಬಿಟ್ಟು ಅಸಹಾಯಕರಾದವರ ಕಥೆಗಳು ಸಂಘರ್ಷಭರಿತವಾಗದಿರಲು ಹೇಗೆ ತಾನೇ ಸಾಧ್ಯ?

'ಬದುಕು-ಒಂದು ಪ್ರವಚನದ ವಿಷಯದಾಚೆಗೆ' ಎಂಬ ಕಥೆಯಲ್ಲಿ ಗೀತಾ ಹಿರಣ್ಯನ್ ಹೇಳುವ 'ಅವಳನ್ನು ಅವಳಿಗೆ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ' ಎಂಬ ಮಾತುಗಳು ಎಷ್ಟೊಂದು ಅರ್ಥಪೂರ್ಣ! ಕೆಟ್ಟ ಹಠ ಮತ್ತು ಪ್ರೇಮ ದುರಂತಗಳ ಒಂದು ಅಸಾಮಾನ್ಯ ಮಿಲನವೇ ತನ್ನ ವ್ಯಕ್ತಿತ್ವವೆಂದು ಸ್ವಯಂ ವಿಶ್ಲೇಷಿಸಿಕೊಳ್ಳುವ ಸ್ತ್ರೀಯ ಪ್ರೀತಿಯ ಆಳವನ್ನ ಜಗತ್ತು ಒಮ್ಮೆಯೂ ಅರ್ಥಮಾಡಿಕೊಳ್ಳುವುದಿಲ್ಲ. ಆಕೆಯ ಪ್ರೀತಿಯೆನ್ನುವುದು ದಾಂಪತ್ಯದಲ್ಲಿ ಒಂದು ಹೊರೆಯಾಗಿ ಪರಿಣಮಿಸುತ್ತದೆ; ಕರಡಿಯ ಆಲಿಂಗನದಂತೆ ಭಯಾನಕವಾಗಿ ಕಾಣುತ್ತದೆ. ತಾಯಿ, ಗೃಹಿಣಿ, ಹೆಂಡತಿ, ಸೋದರಿ - ಹೀಗೆ ಹಲವು ಸ್ಥಾನಗಳಲ್ಲಿ ನಿಲ್ಲುವ ಸ್ತ್ರೀ ಬರವಣಿಗೆ ಎಂಬ ಸ್ವಂತ ಕೆಲಸದ ಯೋಜನೆ ಹಾಕುವಾಗ ಎದುರಿಸಬೇಕಾಗುವ ಸಮಸ್ಯೆಗಳು ಗೀತಾ ಹಿರಣ್ಯನ್‌ರ ಕಥೆಗಳ ಪ್ರಬಲವಾದ ವಿಚಾರಧಾರೆಯಾಗಿದೆ. ಯಾವ ನೋಟಕ್ಕೂ, ಯಾವುದೇ ಹಿಡಿತಕ್ಕೂ ಸಿಗದಂತಹ ವಾಸ್ತವದ ಕಟುಸತ್ಯಗಳನ್ನು ಆಕೆ ತಮ್ಮ ಕಥೆಗಳಲ್ಲಿ ಸೆರೆಹಿಡಿಯುತ್ತಾರೆ.

ಪರಂಪರೆಯಲ್ಲಿ ಹರಿದು ಬರುವ ಸುಳ್ಳುಗಳ ಪ್ರವಾಹದಿಂದಲೇ ಸ್ತ್ರೀಯರ ಬದುಕು ಸಾಗುತ್ತ ಬರುತ್ತದೆಯೆಂಬ ಅರಿವು ಆಶಿತಾರ ಕಥೆಗಳ ಶಕ್ತಿಯಾಗಿದೆ. ಬದುಕಿನ ಭದ್ರತೆಯೆಂದು ನಾವು ತಿಳಿಯುವ ಆಧುನಿಕ ಜೀವನಶೈಲಿಯ ಕೃತಕತೆ ಅದನ್ನು ಪೂರ್ತೀಕರಿಸುತ್ತದೆ; ಪೊಳ್ಳು ಆಶ್ವಾಸನೆಗಳನ್ನು ನೀಡುವ ಸುಳ್ಳುಗಳ ಸರಮಾಲೆಯನ್ನು ಪ್ರತಿಭಟಿಸುತ್ತಾರೆ ಆಶಿತಾ. ಒಂದೇ ಮಾತಿನಲ್ಲಿ ಹೇಳುವುದಾದರೆ 'ಒತ್ತಡದೊಂದಿಗೆ ಕಾಲೆಳೆಯುತ್ತ ಸಾಗುವ ಸಂಘರ್ಷಮಯ ಜೀವನವೇ ಈಕೆ ಕಥೆಗಳಲ್ಲಿ ವೇದ್ಯವಾಗುವ ಅನುಭವಗಳು. ಕಠಿಣ ಪರಿಶ್ರಮದಿಂದ ಮನೆಯನ್ನು ತೂಗಿಸಿಕೊಂಡು ಹೋದರೂ ತನಗೆ ಋಣಿಗಳಾಗಿರಬೇಕಾದವರು ತನ್ನನ್ನು ಕಡೆಗಣಿಸುವುದರಿಂದ ನೋಯುವ ಹೆಣ್ಣಿನ ಭಾವನೆಗಳೇ ಶೋಭಾ ವಾರಿಯರ್‌ರ ಕತೆಗಳ ಮುಖ್ಯ ವಸ್ತು. ನಗರ ಮತ್ತು ಆಧುನಿಕ ಗ್ರೇಸಿ, ಕೆ. ಪಿ. ಸುಧೀರಾ, ಕೆ. ಆರ್. ಮಲ್ಲಿಕಾ, ಪ್ರಿಯಾ ಸಿ., ತಾರಾ, ರೇಖಾ ಮುಂತಾದ ಕತೆಗಾರ್ತಿಯರ ಕಾಳಜಿಗಳು.

ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯಲ್ಲಿ ತಮ್ಮದೇ ಆದ ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳಲು ಈ ಕಥೆಗಾರ್ತಿಯರು ಪ್ರಯತ್ನಿಸುತ್ತಾರೆ. ಬಹಳ ಕಷ್ಟಕರವಾದ ಕೆಲಸ ಇದಾದರೂ ಬರಹಗಾರ್ತಿಯರ ಸ್ವಾನುಭವದ ತಾಜಾತನವು ಅವರ ಬರಹಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ. ಸ್ವಯಂ ವಿಶ್ಲೇಷಣೆಯೇ ಇವುಗಳ ವೈಶಿಷ್ಟ್ಯ. ಸ್ತ್ರೀಪುರುಷರ ನಡುವಿನ

ಸಂಬಂಧ, ಸಂಘರ್ಷ ಹಾಗೂ ಕಪಟ ಮುಖಗಳಲ್ಲಿ ತೋರಿಸುವ ನಾಟಕವೇ ಜೀವನದ ಸತ್ಯ. ಹೆಣ್ಣಿನ ಖಾಸಗಿ ಜಗತ್ತು, ಆಸೆ-ಕನಸುಗಳು, ಸಂತೋಷಗಳೆಲ್ಲವನ್ನು ಇಲ್ಲಿ ನಾವು ಕಾಣಬಹುದು. ಇವರೆಲ್ಲರೂ ಸಮಾನದುಃಖಿಗಳಾದುದರಿಂದ ಎಲ್ಲರೂ ಕಂಡುಕೊಳ್ಳುವ ಅನುಭವಗಳು ಒಂದೇ ತೆರನಾಗಿರುವ ಸಾಧ್ಯತೆಯೂ ಇದೆ. ವ್ಯಕ್ತಪಡಿಸುವ ದಾರಿಗಳು ಮಾತ್ರ ಬೇರೆ ಬೇರೆ.

'ಹೆಣ್ಣಿನ ಬರಹ' ಎಂಬ ಹಣೆಪಟ್ಟಿ ಹಚ್ಚಿ ಒಂದು ಮೆಟ್ಟಿಲು ಕೆಳಗೆ ಇಟ್ಟರೂ ಸ್ಪಷ್ಟವಾಗಿ ಕಾಣಿಸುವ ಸತ್ಯಗಳನ್ನು ತುಂಬಾ ಕಾಲ ಕಡೆಗಣಿಸಲಿಕ್ಕಾಗದು. ಹೆಣ್ಣಿನ ರಚನೆಗಳು, ಕಥೆಗಳು ಎಂದೂ, ಅವರು ಹೇಳುವ ಸತ್ಯಗಳನ್ನು ಅಡಿಗೆ ಮನೆಯ ವಿಷಯಗಳೆಂದೋ, ಹಾಳುಹರಟೆಯೆಂದೋ, ಕೆಲಸಕ್ಕೆ ಬಾರದ ಗೊಣಗಾಟವೆಂದೋ ಪುರುಷರು ಹೇಳುವುದಾದರೆ ಅದು ಪ್ರಜ್ಞಾಪೂರ್ವಕವಾಗಿ ಮಾಡುವ ಉಪೇಕ್ಷೆಯೆನ್ನದೆ ವಿಧಿಯಿಲ್ಲ. ಅದು ಹಾಗಲ್ಲ, ಬದಲಾಗಿ ವಿವಿಧ ದಿಕ್ಕುಗಳಿಂದ ಮೈಮೇಲೆ ಹಾರಿಬಂದು ಹೊಡೆಯುವ ಬಾಣದ ಗಾಯಗಳನ್ನು ಸಹಿಸಿಕೊಂಡು ಧೃತಿಗೆಡದೆ ಮುಂದೆ ಸಾಗುವ ಜೀವನದ ಪರಿಚ್ಛೇದಗಳಿವು, ಸಮಾಜದ ಸತ್ಯಾವಿಷ್ಕಾರದ ಒಳನೋಟಗಳು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಾಗಿದೆ.

○

ಅಸಂಘಟಿತ ಮಹಿಳೆಯರು

❑ *ಚಂಪಾವತಿ ಎಚ್.ಎಸ್.*

ಟೇಕಲ್-ಕಾಡುಗುಡಿ ಅಥವಾ ವೈಟ್‌ಫೀಲ್ಡ್‌ನಿಂದ ರೈಲಿನಲ್ಲಿ 1 ಗಂಟೆಯ ಪ್ರಯಾಣ. ಸುಜಾತ, ರಮಾ ಟೇಕಲ್‌ನಿಂದ ಕಾಡುಗೋಡಿಗೆ ರೈಲಿನಲ್ಲಿ ಬರುತ್ತಾರೆ. ಅಲ್ಲಿಂದ ಒಂದು ಫ್ಯಾಕ್ಟರಿಯ ವ್ಯಾನ್‌ನಲ್ಲಿ ಊಡಿಗೆ ಹೋಗುತ್ತಾರೆ. ಅದು ಇಪ್ಪತ್ತು ನಿಮಿಷದ ಹಾದಿ, ಬೆಳಿಗ್ಗೆ ಮನೆ ಬಿಡುವುದು 7 ಗಂಟೆಗೆ. ಫ್ಯಾಕ್ಟರಿಯ ಒಳಗಡೆ ಹೋಗುವುದು 9 ಗಂಟೆಗೆ ಮತ್ತೆ ಸಂಜೆ 7ರ ಟ್ರೈನ್‌ಗೆ ಮನೆಗೆ ವಾಪಸ್ಸು. ಮನೆ ಸೇರುವುದು ರಾತ್ರಿ 8 ಗಂಟೆಗೆ. ಇವರೀರ್ವರೂ ಕೆಲಸ ಮಾಡುವುದು ಗಾರ್ಮೆಂಟ್ಸ್‌ನಲ್ಲಿ. ಸಂಬಳ 1500/-ರೂ.ಗಳು ಯಾವಾಗ ಕೆಲಸಕ್ಕೆ ಹೋಗುವುದಿಲ್ಲವೋ ಆಗ ಸಂಬಳವಿಲ್ಲ. ಪೇಮೆಂಟ್ ತಿಂಗಳ ಮೊದಲ ವಾರ ಸಿಕ್ಕಬೇಕು. ಆದರೆ ಸಂಬಳವನ್ನು ಸರಿಯಾದ ಸಮಯಕ್ಕೆ ಕೊಡುವುದಿಲ್ಲ. ಕೇಳೋದೂ ಕಷ್ಟ. ಏಕೆಂದರೆ ಏನಾದ್ರು ಕೇಳಿದ್ರೆ, ಮಾಡಿದ್ರೆ, ಕೆಲಸ ಕಳೆದುಕೊಳ್ಳುವುದು ಗ್ಯಾರಂಟಿ.

ಸುಜಾತಳಿಗೆ ಮದುವೆಯಾಗಿದೆ, ಎರಡು ಮಕ್ಕಳು. ದುಡಿಯುವುದಕ್ಕೋಸ್ಕರ ಎರಡೂ ಮಕ್ಕಳನ್ನೂ ತಾಯಿಯ ಮನೆಯಲ್ಲಿಯೇ ಬಿಟ್ಟುಬಿಡುತ್ತಾಳೆ. ಅಲ್ಲೇ ಇರ್ತಾರೆ, ಅಲ್ಲಿಯೇ ಸ್ಕೂಲಿಗೆ ಹೋಗ್ತಾರೆ. 'ಜೀವನ ಸಾಗಬೇಕಲ್ಲ ದುಡೀದಿದ್ದರೆ', ಇಬ್ಬರು ಮಕ್ಕಳ ಓದಿಸಬೇಕು, ಎರಡು ಹೊತ್ತು ಗಂಜಿ ತಿನ್ನೋಕಾದ್ರು ನಾನು ದುಡೀಬೇಕಲ್ಲ ಎನ್ನುವ ಸುಜಾತ ಮನೆಯಲ್ಲಿ ಹೊಲಿಗೆ ಯಂತ್ರ ಇಟ್ಟುಕೊಂಡು ಕೆಲಸ ಮಾಡುತ್ತಾಳೆ. ಈಕೆಯ ಗಂಡನಿಗೆ ಒಂದು ಪುಟಾಣಿ ಅಂಗಡಿಯಿದೆ. ಆದರೆ ಅಷ್ಟರಲ್ಲಿ ಜೀವನ ಸಾಗಬೇಕಲ್ಲ ಎನ್ನುತ್ತಾಳೆ ಸುಜಾತ.

ಇದು ಸುಜಾತ ಅಥವಾ ರಮ ಇಬ್ಬರ ಕಥೆ ಮಾತ್ರವಲ್ಲ. ಉದಾರೀಕರಣ, ಜಾಗತೀಕರಣ ಹೆಚ್ಚಾದ ಹಾಗೆ ಕಾಡುಗೋಡಿ, ವೈಟ್‌ಫೀಲ್ಡ್ ಸುತ್ತಮುತ್ತ ಗಾರ್ಮೆಂಟ್ಸ್, ಮೆಡಿಸನ್, ವಾಚ್ ಭಾಗ ಜೋಡಿಸುವ, ಲೆನ್ಸ್ ತಯಾರಿಸುವ ಅನೇಕ ಫ್ಯಾಕ್ಟರಿಗಳು ತಲೆ ಎತ್ತಿವೆ. ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಮಾಡಿ ಇದ್ದಕ್ಕಿದ್ದ ಹಾಗೆ ಹೇಗಪಾ ಮನೆಯಲ್ಲಿ ಇರುವುದು ಎನ್ನುವ ಹಲವಾರು ಮಹಿಳೆಯರು ಇಂತಹ ಫ್ಯಾಕ್ಟರಿಗಳಲ್ಲಿ ದುಡಿಯುವುದು ಸರ್ವೇಸಾಮಾನ್ಯ. ಬಡತನದ ಬವಣೆಗೆ ಸಿಕ್ಕಿದ ಹಲವಾರು ಮಹಿಳೆಯರು, ಗಂಡ, ಅತ್ತೆ, ಸಂಸಾರದ ಬವಣೆಯಲ್ಲಿ ನೋವು ತಿಂದ ಅನೇಕಾನೇಕ ಹೆಂಗಸರು ಇಂತಹ ಫ್ಯಾಕ್ಟರಿಗಳಲ್ಲಿ ತಮ್ಮ ಅದೃಷ್ಟವೆಂಬಂತೆ ಕೆಲಸಕ್ಕೆ ಸೇರಿಕೊಂಡು ದಿನವಿಡೀ ದುಡಿಯುವುದು 1500 ರಿಂದ 2000ದ ವರೆಗೆ ಮಾತ್ರ.

(22ನೇ ಪುಟ ನೋಡಿ)

ಮಹಿಳೆಯರ ಮೇಲೆ ನಡೆಯುವ ಹಿಂಸೆ.......

ಕನ್ನಡಕ್ಕೆ : ಕೆ. ವತ್ಸಲ

ಸುನೀತಾ, ದೆಹಲಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವೀಧರೆ, ಮಹಿಳಾ ಸಂಸ್ಥೆಯೊಂದರಲ್ಲಿ ಅಲ್ಲಿಯ ಪತ್ರಿಕೆಯೊಂದರ ಸಂಪಾದಕಿ ಮತ್ತು ಈಕೆ ವಿವಾಹವಾಗಿ, ಈಗ ಎರಡು ಮಕ್ಕಳುಂಟು. ಈಕೆ ತನ್ನನ್ನು ಕೊಲ್ಲುವಂಥ ಒಂದು ಅನುಭವವನ್ನು ರಹಸ್ಯವಾಗಿ ತನ್ನಲ್ಲೇ ಇಟ್ಟುಕೊಂಡಿದ್ದಾಳೆ, ಆಕೆಯ ಪತಿ ಅವಳನ್ನು ಕ್ರೂರವಾಗಿ ಥಳಿಸಿದ್ದು, ಇದರಿಂದ ನೊಂದ ಅವಳು ಒಮ್ಮೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದುಂಟು.

ಮೊದಲು ಮೊದಲು, ಸುನೀತಾ, ತನ್ನನ್ನು ಇಂಥಾ ರಾಕ್ಷಸ-ಪ್ರವೃತ್ತಿಯುಳ್ಳ ಪುರುಷನೊಂದಿಗೆ ಮದುವೆ ಮಾಡಿಕೊಟ್ಟಿದ್ದಕ್ಕಾಗಿ ತನ್ನ ಅತ್ತೆ ಮಾವಂದಿರು ಹಾಗೂ ಮೈದುನಂದಿರನ್ನು ಆಕ್ಷೇಪಿಸುತ್ತಿದ್ದಳು. ಎರಡು ವರ್ಷಗಳ ಹಿಂದೆ, ಈಕೆ ತನ್ನ ಗಂಡ ಮತ್ತು ಮಕ್ಕಳೊಂದಿಗೆ ಮಾವನ ಮನೆಯಿಂದ ಬೇರೆ ಮನೆಗೆ (ದೆಹಲಿಯಲ್ಲಿ ಸರ್ಕಾರದಿಂದ ನೀಡಲಾದ ಮನೆಯಿಂದ) ಬಂದಳು. ಎರಡು ತಿಂಗಳ ನಂತರ, ತನ್ನ ಗಂಡನ ಆಕ್ರೋಶದ ಪರಿಣಾಮವಾಗಿ, ಕಣ್ಣಿನ ನೋವಿನಿಂದ ತನ್ನ ಕರ್ತವ್ಯ ನಿರ್ವಹಣೆಗಾಗಿ ಕಛೇರಿಗೆ ತೆರಳುತ್ತಾಳೆ. "ಇಷ್ಟಿದರೂ ತನ್ನ ಪತಿ ಬಹಳ ಒಳ್ಳೆಯವನೆಂದೂ, ತಾನೇ ತಪ್ಪಿತಸ್ಥಳೆಂದೂ ಕೋಪಗೊಂಡಾಗ ಆಕೆಯು ಅತಿಯಾಗಿ ಬಯ್ಯುವುದಾಗಿಯೂ ಹೇಳುತ್ತಾಳೆ.

ಹೀಗೆ ನೊಂದ ಮಹಿಳೆಯರು ಪತಿಯ ದೌರ್ಜನ್ಯಕ್ಕೆ ಒಳಗಾದಾಗಲೂ ಸಹ ತನ್ನದೇ ತಪ್ಪು ಎಂದು ಸತ್ಯಾಂಶವನ್ನು ಮರೆಮಾಚುವುದೂ ಸಾಮಾನ್ಯ. ಇದಕ್ಕೆ ಸುನೀತಾ ಹೊರತಲ್ಲ. ಪ್ರಜಾ ಹೇಳಿಕೆಯ ಅಂತರರಾಷ್ಟ್ರೀಯ ಸಂಸ್ಥೆಯೊಂದರ ಸಮೀಕ್ಷೆಯಂತೆ ಶೇಕಡ 56ರಷ್ಟು ಭಾರತೀಯ ಮಹಿಳೆಯರು ಗಂಡಸು ಕೊಡುವ ಕಿರುಕುಳವನ್ನು ಬಹಿರಂಗ ಪಡಿಸುವುದಿಲ್ಲ. ಅವರ ಮನಸ್ಸಿನ ಭಾವನೆಗಳನ್ನು ತಿಳಿದುಕೊಳ್ಳಲು ನಡೆಸಿದ ಸಮೀಕ್ಷೆಯ ಪ್ರಕಾರ, ರಾಷ್ಟ್ರಾದ್ಯಂತ 1,00,000 ವಿವಾಹಿತ ಮಹಿಳೆಯರನ್ನು ಈ ಪ್ರಶ್ನೆಯನ್ನು ಕೇಳಲಾಯಿತು - ಹೆಂಡತಿಗೆ ಗಂಡನು ಹೊಡೆಯುವುದು ಸರಿಯೇ ತಪ್ಪೇ? ಸರಿಯೆಂದರೆ ಹೇಗೆ? ಇದಕ್ಕೆ ಉತ್ತರವಾಗಿ ಗಂಡ ಹೆಂಡತಿಯಲ್ಲಿ ತಪ್ಪು ಕಂಡರೆ- ಉದಾಹರಣೆಗೆ ಆಕೆ ಅವನಿಗೆ ಅಪ್ರಾಮಾಣಿಕಳಾದರೆ, ಆಕೆ ತವರು ಮನೆಯಿಂದ ಆತ ಅಪೇಕ್ಷಿಸಿದಷ್ಟು ಒಡವೆ, ಉಡುಗೊರೆ-ದುಡ್ಡು ತರದಿದ್ದರೆ, ಅವಳು ಆತನ ಅನುಮತಿಯಿಲ್ಲದೆ ಮನೆಯಿಂದ ಹೊರಗೆ ಹೋದರೆ, ಅಥವಾ ಅಲಕ್ಷಿಸಿ ಮಕ್ಕಳನ್ನು ಸುಧಾರಿಸದೇ ಇದ್ದರೆ, ಅಥವಾ ಮಾಡಿದ ಅಡುಗೆ ರುಚಿಕರವಾಗಿರದಿದ್ದರೆ, ಗಂಡ ಹೆಂಡತಿಯನ್ನು ಹೊಡೆಯುವುದು ಸಾಮಾನ್ಯ ಎಂಬ ಉತ್ತರ ಸಿಕ್ಕಿತು.

ಶೇಕಡ 40ರಷ್ಟು ಜನ ಮೇಲೆ ಹೇಳಿದ ಕಾರಣಗಳಲ್ಲಿ ಯಾವುದಾದರೂ ಒಂದು ಸಮಂಜಸವೆಂದು ಒಪ್ಪಿಕೊಂಡರು. ಅಲ್ಲದೇ, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೇ ಇರುವುದು ಗಂಡನ ಆಕ್ರೋಶಕ್ಕೆ ಸಹಜವೆಂದು ಒಪ್ಪಿಕೊಂಡಿದ್ದಾರೆ. ಕೇವಲ 7%ರಷ್ಟು ಮಹಿಳೆಯರು, ಸಾಕಷ್ಟು ವರದಕ್ಷಿಣೆ ತರದೇ ಇರುವುದು ಗಂಡನ ಕ್ರೌರ್ಯಕ್ಕೆ ಕಾರಣವೆಂದು ಒಪ್ಪಿಕೊಂಡಿದ್ದಾರೆ. ನಾಗರಿಕತೆ ಹೆಚ್ಚಾದಂತೆ ಮತ್ತು ಅವರ ವಿದ್ಯೆಗೆ ಅನುಗುಣವಾಗಿ ಈ ಹೇಳಿಕೆಯು ಬದಲಾಗಿದೆ.

ಆದರೆ, ವಿದ್ಯಾವಂತ ನಗರವಾಸೀ ಮಹಿಳೆಯರು, ಗಂಡನು ಹೆಂಡತಿಯನ್ನು ಥಳಿಸುವುದನ್ನು ಒಪ್ಪುವುದೇ ಇಲ್ಲ, ಆದರೂ ಅವರು ಇದನ್ನು ಮೌನವಾಗಿಯೇ ಸಹಿಸಿಕೊಂಡು ನೋವು ಅನುಭವಿಸುತ್ತಿದ್ದಾರೆ.

ಉದಾಹರಣೆಗೆ, 25 ವರ್ಷದ ಪಂಚತಾರಾ ಹೊಟೇಲೊಂದರಲ್ಲಿ ಉದ್ಯೋಗದಲ್ಲಿರುವ ಶರ್ಮಿಳಾ ಬೋಸ್, ಮೊದಲಬಾರಿಗೆ ಗಂಡನಿಂದ ಹೊಡೆಯಲ್ಪಟ್ಟಾಗ ಅತ್ಯಂತ ಆಶ್ಚರ್ಯಚಕಿತಳಾದಳು. ಆತನ ಹೊಡೆತಕ್ಕೆ ಬಿದ್ದು ನೆಲಕ್ಕುರಳಿ, ಮೇಲೆದ್ದು, ನಂತರ ತನ್ನ ಪತಿಯ ಒಡಹುಟ್ಟಿದವರೊಡನೆ, ಊಟಕ್ಕೆಂದು ಕೆಳಮಹಡಿಯ ಊಟದ ಕೋಣೆಗೆ ಹೊರಡಲು ಅನುವಾದಾಗ ಮನಸ್ಸಿನಲ್ಲೇ ಈ ಗಂಡನ ಹೊಡೆತ, ಕಿರುಕುಳ, ಇವೆಲ್ಲ ಹೇಗೆ ತಡೆದುಕೊಳ್ಳಲು ಸಾಧ್ಯವೆಂದು ಯೋಚಿಸಿದಳು. ಅವಳು, ಕೇವಲ ಎರಡೇ ಎರಡು ತಿಂಗಳುಗಳ ಹಿಂದೆ ತನ್ನೊಡನೆ ಕಾಲೇಜಿನಲ್ಲಿ ಓದುತ್ತಿದ್ದ ಕ್ರೀಡಾಪಟುವಾಗಿದ್ದ ಮತ್ತು ಆಕೆಯ ಜೊತೆಯಲ್ಲೇ ಕೆಲಸ ಮಾಡುವ ಮನೀಷ್ ಶರ್ಮನೊಂದಿಗೆ ವಿವಾಹವಾಯಿತು. ಅವಳು ಬೆಂಗಾಲಿಯಾಗಿದ್ದು ಅವನು ಪಂಜಾಬಿಯಾಗಿದ್ದರೂ, ಎರಡೂ ಕಡೆಯವರೂ ಒಪ್ಪಿದ್ದು ಈ ಮದುವೆ ನಡೆಯಿತು. ಮನೆಗೆ ಬರಲು ಅರ್ಧ ಗಂಟೆ ತಡವಾಗಿದ್ದರ ಪರಿಣಾಮವಾಗಿ, ಆತನು ಅವಳು ತನ್ನ ಗಂಡನಿಂದ ಹೊಡೆಯಲ್ಪಟ್ಟೆ ಎಂದು ಎಲ್ಲರ ಹತ್ತಿರ ಹೇಳಿಕೊಳ್ಳುವುದು ಆಕೆಗೆ ಸರಿಯಲ್ಲವೆನಿಸಿತು. ಆ ದಿನ

ರಾತ್ರಿಯೇ ಆಕೆಯ ಗಂಡ, ತನ್ನ ತಪ್ಪನ್ನು ತಿಳಿದು, ಕ್ಷಮೆ ಯಾಚಿಸಿ, ತಾನು ಅವಳನ್ನು ಎಷ್ಟೊಂದು ಪ್ರೀತಿಸುತ್ತೇನೆಂದು ಹೇಳಿದಾಗ, ಅವಳು ಅವನನ್ನು ಸಂಪೂರ್ಣವಾಗಿ ನಂಬಿಬಿಟ್ಟಳು. ಆದರೆ, ಅದು ಮತ್ತೊಂದು ಬಾರಿ ಇಂಥದೇ ಘಟನೆಯಾಗುವ ವರೆಗೆ ಮಾತ್ರ. ಹೀಗೆಯೇ, ಶರ್ಮಿಳಾ ತನ್ನ ಗಂಡನೊಂದಿಗೆ ಮೂರು ವರ್ಷಗಳಿಂದ ಅನುಭವಿಸುತ್ತಿದ್ದು, ತನ್ನ ಕಷ್ಟವನ್ನು ಯಾರ ಹತ್ತಿರವೂ ಹೇಳಿಕೊಳ್ಳದೇ ತನ್ನೆಲ್ಲ ಸ್ವಂತಿಕೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಂಡು ಮನಸ್ಸಿನಲ್ಲೇ ಕೊರಗು ತ್ತಿದ್ದಾಳೆ.

ಮಹಿಳಾ ಸಂಸ್ಥೆಯೊಂದರಲ್ಲಿ ಟ್ರೇಯ್ನರ್ ಮತ್ತು ಫೀಲ್ಡ ಆಫೀಸರ್ ಆಗಿ ದುಡಿಯುತ್ತಿರುವ ಶಾಂತಿಯು ಹೇಳುವಂತೆ ವಿವಾಹಿತ ಮಹಿಳೆಯರು ಅನುಭವಿಸುವ ದೌರ್ಜನ್ಯದಲ್ಲಿ ಎರಡು ಬಗೆಯುಂಟು ಅಂದರೆ ಶ್ರೀಮಂತ ಮಹಿಳೆಯರು ಯಾರಿಗೂ ಕಾಣದಂತೆ ಈ ನೋವನ್ನು ಅನುಭವಿಸಿದರೆ, ಬಡ ಮಹಿಳೆಯರು ಎಲ್ಲರ ಎದಿರಿನಲ್ಲಿ ಬಹಿರಂಗವಾಗಿ, ತಮ್ಮ ಗಂಡಂದಿರು ತಮಗೆ ಹೊಡೆದದ್ದನ್ನು ಅನುಭವಿಸಬೇಕು ಎಂದೂ ಆದರೆ ಶ್ರೀಮಂತರ ಪತ್ನಿಯರು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಲು - ಯಾರ ಬಳಿಯಲ್ಲೂ ಹೇಳಿಕೊಳ್ಳುವುದಿಲ್ಲ ವೆಂದು ಹೇಳುತ್ತಾರೆ. ಆದ್ದರಿಂದ ಇಂಥವರ ಸಂಖ್ಯೆ ಗಣನೆಗೆ ಸಿಗದು. ದೇಶದಾದ್ಯಂತ ನಡೆಸಿದ ಅಂತರ ರಾಷ್ಟ್ರೀಯ ಸಮಿತಿಯ ಸಮೀಕ್ಷೆಯ ಪ್ರಕಾರ (ICRW)ಶೇಕಡ 60ರಷ್ಟು ವಿವಾಹಿತ ಮಹಿಳೆಯರು ಜಾತಿ, ವರ್ಗ ಮತ್ತು ವಿದ್ಯೆಯ ಅಂತರವಿಲ್ಲದೆ ಈ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಕೇವಲ ಕೆಲವೇ ಕೇಸುಗಳನ್ನು ಬಿಟ್ಟರೆ, ಪ್ರತಿದಿನ ನಡೆಯುವ ಹೆಂಡತಿಯ ಮೇಲಿನ ದಬ್ಬಾಳಿಕೆ, ಕ್ರೌರ್ಯ ಇವೆಲ್ಲವೂ ಮಹಿಳೆಯರ ಅಂತರಂಗದಲ್ಲೇ, ಯಾರಿಗೂ ಹೇಳಿಕೊಳ್ಳದೆ ಗುಪ್ತವಾಗಿ ಬೆಳೆಯುತ್ತಿವೆ.

ಮೇಲಿನ ವರ್ಗದವರಲ್ಲಿ ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಲೆಂದೇ ಅಲ್ಲದಿದ್ದರೂ, ಸಮಾಜವು ತಮ್ಮನ್ನು ತುಚ್ಛವಾಗಿ ಕಂಡು, ತಾನು ಹೇಳುವುದನ್ನು ನಂಬದೇ ಇರುವುದೇ ಈ ಮೂಕ ವೇದನೆಗೆ ಕಾರಣವೆಂದು ಹೇಳುತ್ತಾರೆ. ಇಂದಿರಾ ಜೈಸಿಂಗ್-ಈಕೆ ವಕೀಲ ವೃಂದದ ಮುಖ್ಯಸ್ಥೆಯಾಗಿದ್ದು, ದೆಹಲಿಯಲ್ಲಿ ಮಹಿಳಾ ಕಾನೂನು ರಕ್ಷಣೆ ಕೇಂದ್ರದ ಅಧಿಕಾರಿಯೂ ಆಗಿದ್ದಾರೆ. ಆಕೆ ಹೇಳುವಂತೆ, ನಮ್ಮ ಸಮಾಜವು ಯಾವ ಹೆಣ್ಣೇ ಆಗಲಿ, ಅವಳು ತನ್ನ ಗಂಡನ ದೌರ್ಜನ್ಯದ ಬಗ್ಗೆ ಬಹಿರಂಗವಾಗಿ ಹೇಳಿದರೆ, ಅವಳನ್ನು ನಂಬದೇ ಅವಳು "ಸುಳ್ಳುಬುರುಕಿಯೆಂದು" ಪಟ್ಟ ಕಟ್ಟುವ ಸಾಧ್ಯತೆಗಳು ಹೆಚ್ಚು.

26 ವರ್ಷದ ಶಿರಿನ್ ಜುವಲೆ ವ್ಯಾಲೆಂಟೈನ್ಸ್‌ಡೇ ಯಂದು 1998ರಲ್ಲಿ ತಾನು ಕೇವಲ ಎರಡು ಬಾರಿ ಭೇಟಿಯಾದ ಪುರುಷನೊಂದಿಗೆ ವಿವಾಹವಾಯಿತು. ಆದರೆ ಮುಬಿನ್ ಮುಲ್ಲ ನೋಡಲು ಸುಂದರ ಪುರುಷ, ಕುವೇಟ್‌ನಲ್ಲಿ ಓಟಿಸ್ ಎಲಿವೇಟರ್ಸ್ ಎಂಬ ಕಂಪನಿಯೊಂದರಲ್ಲಿ ಎಂಜಿನೀರ್ ಆಗಿ ಕೆಲಸ ಮಾಡುತ್ತಿದ್ದಾನೆ. ಅವಳ ಮತ್ತು ಅವಳ ಗಂಡನ ನಡುವಿನ ದಾಂಪತ್ಯ ಸಾಮರಸ್ಯ, ಅವಳ ಗಂಡನ ಲೈಂಗಿಕ ತೃಷೆಯ ಅತಿರೇಕದಿಂದಾಗಿ ನುಚ್ಚುನೂರಾಯಿತು.

ಶಿರೀನ್ ಹೇಳಿದಂತೆ ಅವಳ ಗಂಡನ ಅತಿಯಾದ ಲೈಂಗಿಕ ಬಲಾತ್ಕಾರದಿಂದ ಬಹುಶಃ ಪ್ರತಿದಿನವೂ ಅವಳ ಮೇಲೆ ಅತ್ಯಾಚಾರವೆಸಗಿದಂತೆ ಆಯಿತು. "ನನ್ನ ಮಧುಚಂದ್ರವು ಕರಾಳ ದಿನಗಳಾಗಿ ಪರಿವರ್ತನೆಗೊಂಡವು, ನಾನು ಆ ದಿನಗಳಲ್ಲಿ ಋತುಮತಿಯಾದ ಕಾರಣ, ಆ ನಮ್ಮ ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಊರಿಗೆ ಹಿಂತಿರುಗಿದುದಲ್ಲದೆ, ನಾನು ಬೇಕೆಂದೇ ಹೀಗೆ ಏರ್ಪಾಡು ಮಾಡಿಕೊಂಡಿರುವುದಾಗಿ ನನ್ನನ್ನು ಅನ್ಯಥಾ ಬೈದನು" ಎಂದು ಹೇಳುತ್ತಾಳೆ. ಹೆಣ್ಣಿನ ಲಾಲಸೆಯಿಂದ ತೃಪ್ತಿಗೊಳ್ಳದ ಅವನು ನನ್ನ ಆ ಮಧುಚಂದ್ರಕ್ಕೆ ಕರೆದುಕೊಂಡು ಹೋದದ್ದಕ್ಕೆ ತಚ್ಛವಾಗಿ, ಹೀನಾಯವಾಗಿ ಬೈದನು ಎಂದು ಹೇಳುತ್ತಾಳೆ. ಆತನ ಅಸಹ್ಯ ಮತ್ತು ಒರಟಾದ ವರ್ತನೆಯಿಂದ ಗಾಬರಿಗೊಂಡ ಆಕೆ, ಸ್ವಷ್ಟ ಸಹನೆಯನ್ನು ತಾಳುವಂತೆ ಹೇಳಿದುದ್ದಕ್ಕೆ ಕೋಪಗೊಂಡು, "ಇದಕ್ಕಾಗಿ ಏನು ನಾನು ನಿನ್ನನ್ನು ಮದುವೆಮಾಡಿಕೊಂಡಿದ್ದು?" ಎಂದು ಕೂಗಾಡಿದನು. ಅಲ್ಲದೆ ಮನೆಯ ಎಲ್ಲರ ಎದುರಿಗೂ, ತಾನು ತನ್ನ ಹೆಂಡತಿ ಯೊಡನೆ ಮಲುಗುತ್ತಿಲ್ಲವೆಂದೂ ಹೇಳಿದನು. ಆಕೆ ನನ್ನ ತವರು ಮನೆಗೆ ಹಿಂದಿರುಗಿ ವಿವಾಹ ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದಾಗ, ಯಾರೂ ಅವಳಿಗೆ ಸಹಾಯ ಹಸ್ತ ನೀಡಿ ಧೈರ್ಯ ನೀಡಲಿಲ್ಲ. ಮುಬಿನ್‌ನನ್ನು ಒಂದು ಲಕ್ಷ ರೂ. ತನಗೆ ಕೊಡಬೇಕೆಂದೂ ಇಲ್ಲದಿದ್ದಲ್ಲಿ ವಿಚ್ಛೇದನ ಪತ್ರಕ್ಕೆ ಸಹಿ ಹಾಕುವುದಿಲ್ಲವೆಂದೂ ಹೇಳಿದನು. ಆದರೆ, ಒಂದು ದಿನ ಅವಳು ಕೆಲಸದಿಂದ ಮನೆಗೆ ಹಿಂತಿರುಗಿ ಮಹಡಿಯ ಮೆಟ್ಟಲನ್ನು ಹತ್ತುತ್ತಿರುವಾಗ, ಅವಳ ಗಂಡ, ರಭಸವಾಗಿ ಧಾವಿಸಿಬಂದು, ಆಸಿಡ್‌ನ್ನು ಅವಳ ಮುಖಕ್ಕೆ ಎರಚಿದಾಗ ಅವಳಿಗೆ ಆದ ಆಘಾತ ಹೇಳತೀರದು. ಹೀಗೆ ಮುಖವನ್ನು ಸುಡುವ ಬದಲು, ತನ್ನನ್ನು ಇಡಿಯಾಗಿ ಸುಟ್ಟುಹಾಕಬಾರದಿತ್ತೆ? ಎಂದು ಗೋಳಿಟ್ಟಳು. ಆದರೆ, ಇಷ್ಟು ದಿನಗಳು ಅವನ ಕ್ರೌರ್ಯದ ಬಗ್ಗೆ ನಾನು ಯಾರಿಗೆ ಹೇಳಿದರೂ ನಂಬುತ್ತಿರಲಿಲ್ಲ. ಆದರೆ ಈಗ ಜನರಿಗೆ ಅರ್ಥವಾಗುತ್ತದೆ ನನ್ನ ಕಷ್ಟವೇನು ಎಂದು ಹೇಳುತ್ತಾಳೆ.

ಸಮಾಜದ ಒತ್ತಡದಿಂದ ಮಾತ್ರವಲ್ಲದೆ, ಮಹಿಳೆಯರು

ತಮ್ಮ ಪತಿಯ ಮೇಲಿನ ವಿಶ್ವಾಸದಿಂದಲೋ ಅಥವಾ ಬೇರೆ ಮಾರ್ಗವಿಲ್ಲದೆ, ಅವರ ದೌರ್ಜನ್ಯವನ್ನು ಯಾರಿಗೂ ಹೇಳದೆ ಗುಪ್ತವಾಗಿ ಅನುಭವಿಸುತ್ತಿದ್ದಾರೆ. ಅವರಿಗೆ ಪೊಲೀಸರಾಗಲೀ, ಲಾಯರುಗಳಾಗಲೀ, ತಮಗೆ ಸಹಾಯಹಸ್ತ ನೀಡುವರೆಂದು ನಂಬಿಕೆಯೇ ಇಲ್ಲದಂತಾಗಿದೆ.

ಆತ್ಮಹತ್ಯೆ ಮಾಡಿಕೊಳ್ಳಲು ಮಾಡಿದ ಪ್ರಯತ್ನ ವಿಫಲವಾಗಿ ಆಸ್ಪತ್ರೆಗೆ ಬಂದು ಸೇರಿದಾಗಲೂ ಸಹ ಸುನೀತಾ ತನ್ನ ಗಂಡನ ಕ್ರೌರ್ಯವನ್ನು ಯಾರಿಗೂ ಹೇಳಲಿಲ್ಲ. ಪೊಲೀಸರು ಅವನನ್ನು ಅರೆಸ್ಟ್ ಮಾಡಿದರೆ ತನ್ನ ಎರಡು ಮಕ್ಕಳ ಗತಿಯೇನು? ಎಂದು ಕೇಳುತ್ತಾಳೆ. ಮತ್ತು ತಾನು ಪೊಲೀಸರ ಬಳಿ ಕಂಪ್ಲೇಂಟ್ ಕೊಡುವುದಿಲ್ಲವೆಂದು ಖಾತ್ರಿಯಾದೊಡನೆ, ಅವನು ತನ್ನ ದೌರ್ಜನ್ಯವನ್ನು ಮತ್ತಷ್ಟು ಜಾಸ್ತಿ ಮಾಡಬಹುದು ಎಂದೂ ಹೇಳುತ್ತಾಳೆ.

ಕೌಟುಂಬಿಕ ಸಮಸ್ಯೆಗಳು ಹೆಚ್ಚಿ ಅದು ಇಂಥ ಕರಾಳದ ವರೆಗೂ ಹೋಗುವತನಕ ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಕಲ್ಕತ್ತ ನಗರದ ಅಲೋಕಿ ಜಲನ್‌ನನ್ನು ಪೊಲೀಸರು ಬಂಧಿಸಿದ್ದು ಕೇವಲ ಅವನು ತನ್ನ ಪತ್ನಿಯನ್ನು ಥಳಿಸಿದ್ದಾಗಿ. ಅಲ್ಲ, ಅವನು ಅವಳನ್ನು ಕೊಂದದಕ್ಕಾಗಿ ರುಚಿಕಾ ಪೊಲೀಸರು ಮೊರೆಹೋದಾಗ, ಅವರು ಅವಳ ಗಂಡನನ್ನು ಕರೆಸಿ ಪತ್ನಿಯೊಡನೆ ಸರಿಯಾದ ಮಾರ್ಗದಲ್ಲಿ ನಡೆದು ಕೊಳ್ಳುವಂತೆ ಹೇಳಿ, ಅದಕ್ಕಾಗಿ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡರು. ಇಂತಹ ಮೂರು ಘಟನೆಗಳಾದ ನಂತರ ರುಚಿಕಾಳ ಶವ ಅವಳ ಗಂಡನ ಕಾರಿನಲ್ಲಿ ಸಿಕ್ಕು, ನೆರೆಹೊರೆಯವರು ಅವಳ ಗಂಡ ಅವಳನ್ನು ಸದಾಕಾಲ ಹೊಡೆದು-ಬಡೆಯುತ್ತಿದ್ದುದನ್ನು ಈಗ ಹೇಳುತ್ತಾರೆ.

ಹೀಗೆಯೇ, ಮೂರು ಮಕ್ಕಳ ತಾಯಿ ಫ್ಲೇವಿಯಾ ಆಗ್ನೆಸ್, ಇಪ್ಪತ್ತು ವರ್ಷಗಳ ಹಿಂದೆ ಸಹಾಯಕ್ಕಾಗಿ ಪೊಲೀಸರ ಬಳಿ ಹೋದಾಗಲು ಸಹ ಅವಳಿಗೆ ಸಿಕ್ಕ ಸಹಾಯ ಅತ್ಯಲ್ಪ. ಆಗ ಅವರು ಅವಳ ಗಂಡ ವಿದ್ಯಾವಂತನೆಂದು, ಹೀಗೆ ಕಂಪ್ಲೇಂಟ್ ದಾಖಲಿಸಿದರೆ, ಅವಳಿಗೆ ಅದರಿಂದ ಇನ್ನೂ ಹೆಚ್ಚು ತೊಂದರೆ ಆಗುವುದೆಂದೂ ಹೇಳಿದರು. ಅವಳ ಮಕ್ಕಳು ಒಳ್ಳೆಯ ಮಾರ್ಗದಲ್ಲಿ ಬೆಳೆಯದೆ, ಮುಂದೆ ಇದರಿಂದ ಇನ್ನೂ ಅನಾಹುತ ಆಗುವುದೆಂದೂ ಹೇಳಿದಾಗ, ಅವಳು ತನ್ನ ಅರ್ಜಿಯನ್ನು ಹಿಂತೆಗೆದುಕೊಂಡಳು. ಹೀಗೆ ತನ್ನ ಸ್ವಂತ ಕೇಸಿನಲ್ಲೇ ಹೋರಾಡುತ್ತಿದ್ದಾಳೆ ಈಕೆ, ಹೆಸರಾಂತ ಲಾಯರ್ ಮತ್ತು ಮಹಿಳಾ ಸಂಸ್ಥೆಯೊಂದರ ಮುಖ್ಯಸ್ಥೆ.

ಹೀಗೆಯೇ ಪೊಲೀಸರು ಸುಮಾರು 20 ವರ್ಷಗಳಿಂದ ಇಂತಹ ನತದೃಷ್ಟ ಮಹಿಳೆಯರ ಅಳಲನ್ನು ಕಿವಿಗೆ ಹಾಕಿಕೊಳ್ಳದೆ ಅಲಕ್ಷದಿಂದಿದ್ದಾರೆ. ದೆಹಲಿಯ ಮಹಿಳೆಯರ ಮೇಲಿನ ದೌರ್ಜನ್ಯ ವಿರುದ್ಧ ಸ್ಥಾಪಿಸಲಾದ ಶಾಖೆಯ ಅಡಿಷನಲ್ ಕಮೀಷನರ್ ಆದ ಡಿ.ಟಿ. ಬಾರ್ಡ್ - "ಇಂಥಹ ಅರ್ಜಿಗಳು ಬಹಳ ಸಾಮಾನ್ಯ, ಏಕೆಂದರೆ ಗಂಡನು ಕೋಪಗೊಂಡಾಗ ಅಥವಾ ಅತಿಯಾಗಿ ಬಳಲಿ ಬಂದಾಗ ಹೆಂಡತಿಯು ಅವನಿಗೆ ಕಿರಿಕಿರಿಯಾಗುವಂತೆ ಪ್ರತ್ಯುತ್ತರ ಕೊಟ್ಟಾಗ ಅವನು ಒಂದೆರಡು ಏಟು ಹೊಡೆಯುವುದು ಸಾಮಾನ್ಯ ಎಂದು ಪೊಲೀಸರ ಧೋರಣೆ ತಾಳುತ್ತಾರೆ" ಎಂದು ಹೇಳುತ್ತಾರೆ. "ಕುಡುಕರು ಅಥವಾ ಬುದ್ಧಿಭ್ರಮೆಯಾದವರು ಮಾತ್ರ ವೈದ್ಯಕೀಯ ಸಹಾಯವನ್ನು ಪಡೆಯಬೇಕಾಗುತ್ತದೆ ಎಂದು ಹೇಳುತ್ತಾರೆ. ಪ್ರತಿವರ್ಷ, ದಾಖಲಾದ 7,250 ಕೇಸುಗಳಲ್ಲಿ ಒಂದೂ ಸಹ ಹೆಂಡತಿಗೆ ಕೊಡುವ ದೌರ್ಜನ್ಯದ ಮೇಲೆ ದಾಖಲಾದ ಕೇಸು ಆಗಿರುವುದಿಲ್ಲ. ಶೇಕಡ 90ರಷ್ಟು ಕೇಸುಗಳು ವರದಕ್ಷಿಣೆಗೆ ಸಂಬಂಧಪಟ್ಟ ಕೇಸುಗಳಾಗಿರುತ್ತವೆ. ವರದಕ್ಷಿಣೆಗೆ ಸಂಬಂಧಪಟ್ಟ ಕೇಸುಗಳು ಬಹಳ ಬಹಳ ಕಡಿಮೆ, ಎಂದು ಶ್ರೀ ಬಾರ್ಡೆ ಹೇಳುತ್ತಾರೆ. ಈ ಬಹುಶಃ ಕೇಸುಗಳು ಹೆಂಡತಿಯನ್ನು ಗಂಡ ತಿರಸ್ಕರಿಸುವ ವಿರುದ್ಧ, ನಪುಂಸಕತ್ವ ಅಥವಾ ಆಸ್ತಿಗೆ ಸಂಬಂಧಪಟ್ಟ ಕೇಸುಗಳಾಗಿರುತ್ತವೆ.

ಇಂಡಿಯನ್ ಪೀನಲ್ ಕೋಡ್‌ನ 498(A) ಸೆಕ್ಷನ್‌ನ ಪ್ರಕಾರ ಕೌಟುಂಬಿಕ ದೌರ್ಜನ್ಯದ ವಿರುದ್ಧ ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ ಮತ್ತು ಪೊಲೀಸರ ಮನಸ್ಸಿನ ನಿಲುವನ್ನು ಜೈಸಿಂಗ್‌ರವರು ಒಟ್ಟಾಗಿ ಸೇರಿ ಕುಟುಂಬದಲ್ಲಿ ನಡೆಯುವ ದೌರ್ಜನ್ಯದ ವಿರುದ್ಧ ಕೋರ್ಟಿನಲ್ಲಿ ಸೂಕ್ತ ಪರಿಹಾರ ಬೇಡಲು ಬಂದ ಮಹಿಳೆಯರಿಗೆ, ತಮ್ಮ ಮನೆಗಳಿಂದ ಹೊರಗಟ್ಟಲ್ಪಟ್ಟ ಸ್ತ್ರೀಯರು ಮತ್ತು ತಮ್ಮ ಮಕ್ಕಳನ್ನು ತಮ್ಮ ಬಳಿ ಸಾಕುವುದರಿಂದ ವಂಚಿತರಾದ ಮಹಿಳೆಯರಿಗೆ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಲಾಯರುಗಳು ತಮ್ಮ ಅರ್ಜಿಯ ಡ್ರಾಫ್ಟ್‌ನಲ್ಲಿ ಹೀಗೆ ಹೇಳಿದ್ದಾರೆ - "ಒಬ್ಬ ಗಂಡಸು ತನ್ನ ಹೆಂಡತಿಯನ್ನು ಯಾವ ಒಂದು ದಾಕ್ಷಿಣ್ಯವಿಲ್ಲದೇ ಮನೆಯ ಹೊರಗೆ ಹಾಕುತ್ತಾನೆ ಹಾಗೂ ಅವಳು ನಂತರ ಕೋರ್ಟಿನಲ್ಲಿ ಸಲ್ಲಿಸಬಹುದಾದ ಮನವಿಯಿಂದ ವಂಚಿತಳಾಗುವಂತೆ ಹಣ್ಣುಗಾಯಿ-ನೀರುಗಾಯಿ ಮಾಡಿ ಕೊನೆಗೆ ಅವಳಿಗೆ ನೀಡಬೇಕಾದ ಜೀವನಧನವನ್ನು ಇಲ್ಲದಂತಾಗಿಸುತ್ತಾರೆ. ಅವಳಿಗೆ ತನ್ನ ಮಕ್ಕಳಿಂದ ದೂರಮಾಡಿ ಅಗಲಿಕೆಯುಂಟಾಗುವ ಹಾಗೆ ಮಾಡಿ, ಶಾಶ್ವತವಾಗಿ ಅವಳ ಮನಸ್ಸಿನಲ್ಲಿ ಭಯದ ಬೀಜವನ್ನು ಬಿತ್ತುತ್ತಾರೆ ಮತ್ತು ಇದನ್ನೇ ಉಪಾಯವಾಗಿಟ್ಟುಕೊಂಡು ಹೇಗಾದರೂ ಮಾಡಿ

ರಾಜಿಯಾಗುವಂತೆ ಪರೋಕ್ಷವಾಗಿ ಮಾನಸಿಕ ಒತ್ತಡ ತಂದು ಬಲಾತ್ಕರಿಸುತ್ತಾರೆ.

ಹೀಗೆ, ಈ ಕಾರಣಗಳಿಂದಲೇ ಡಯಾನಾ ಡ್ರೀಗೋ, ತನ್ನೆರಡು ಮಕ್ಕಳಿಗಾಗಿ ಬ್ಯಾಸಿಲ್ ಮೆನಸೀಜ್‌ನ ಜೊತೆಗಿನ ವೈವಾಹಿಕ ಬಂಧನದಲ್ಲಿ 23 ವರ್ಷಗಳಿಂದ ಹೊಡೆಯುವ ಮಟ್ಟಕ್ಕೆ ಬೆಳೆದಿದ್ದಾನೆ. ಅವಳಿಗೆ ಈ ಬದುಕು ಒಂದು ನರಕವೇ ಸರಿ. ಅವಳ ಗಂಡ ಕುಡಿದು ಬಂದು, ಅವಳ ಮೇಲೆರಗಿ ರಾಕ್ಷಸನಂತೆ ವರ್ತಿಸಿ, ಅವಳನ್ನು ಲೈಂಗಿಕ ಕ್ರಿಯೆಗೆ, ಬಲಾತ್ಕರಿಸಿ, ಕಡೆಗೆ ಕೈಗೆ ಸಿಕ್ಕ ಬೆಲ್ಟ್, ಕೋಲು ಮತ್ಯಾವು ದರಿಂದಲೋ ಥಳಿಸುವುದು ಸಾಮಾನ್ಯವಾಗಿತ್ತು.

ಡಯಾನಾ ಇಂತಹ ಬಾಳಿನಲ್ಲೇ ಬದುಕಿಕೊಂಡು ಕಡೆಗೆ ಅವಳ ಹೆತ್ತ ಮಗಳ ಮೇಲೆ ಅವಳ ಗಂಡನ ಲೈಂಗಿಕ ಅತ್ಯಾಚಾರವನ್ನೂ ಕಣ್ಣಿನಿಂದ ನೋಡಬೇಕಾಯಿತು. ಇಷ್ಟಲ್ಲದೇ ಅವಳ ಕೊಲೆಗೆ ಅವನು ಪ್ರಯತ್ನಿಸಿದ್ದುಂಟು. ಕೊನೆಗೊಂದು ದಿನ ತನ್ನ ಹೆತ್ತ ಮಗನೇ (23ವರ್ಷ) ಅವಳಿಗೆ ಮುಳ್ಳಾಗಿ (ತನ್ನ ಗಂಡನು ಮಧ್ಯಸೇವನೆ ಮಾಡುತ್ತಾ ಎದುರಿಗೆ ಕುಳಿತು ನೋಡುತ್ತಿದ್ದಂತೆಯೇ) ತನ್ನನ್ನು ಲೆದರ್ ಬೆಲ್ಟ್‌ನಿಂದ ಹೊಡೆಯುವಂತಾದಾಗ, ಮನೆ ತೊರೆಯುವ ನಿರ್ಧಾರಕ್ಕೆ ಬಂದಳು. ತಾನು ಹಾಗೂ ತನ್ನ ಮಗಳು ಈ ನರಕಯಾತನೆಯಿಂದ ದೂರವಿರುವುದೇ ಲೇಸೆಂದು ಬಗೆದಳು. ಈಗ ಇವರಿಬ್ಬರೂ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ. ಮಕ್ಕಳಿಗೆ ಪಾಠ ಹೇಳಿಕೊಟ್ಟು ಸ್ವತಂತ್ರ ಜೀವನವನ್ನು ಅನುಭವಿಸುತ್ತಿದ್ದಾರೆ.

ಆದರೆ, 31 ವರ್ಷದ ಶ್ಯಾಮಲ, ದೆಹಲಿಯ ಖ್ಯಾತ ಸಂಸ್ಥೆಯೊಂದರಲ್ಲಿ ಬಿಸಿನೆಸ್ ಮ್ಯಾನೇಜಮೆಂಟ್ ವಿಷಯದ ಅಧ್ಯಾಪಕಿಯಾಗಿದ್ದು, ತನ್ನ ಗಂಡನ ದುಷ್ಟಮಾರ್ಗವನ್ನು ತನ್ನ ಮಗನೂ ಅನುಕರಿಸಲು ಪ್ರಾರಂಭಿಸುವ ಮೊದಲೇ ಸರಿಯಾದ ನಿರ್ಧಾರ ತೆಗೆದುಕೊಂಡಳು. ಅವಳು ಆರು ವರ್ಷಗಳ ಹಿಂದೆ ವಿವಾಹವಾಗಿದ್ದು ಅವಳ ಗಂಡನಾದ ಮೋಹನ್‌ರಾವ್ ತಾನೇ ಅವಳನ್ನು ಹೊಡೆಯುವುದಲ್ಲದೆ ಅವಳ ಮಲತಂದೆಯನ್ನೂ ತನ್ನ ದೌರ್ಜನ್ಯದಲ್ಲಿ ಭಾಗಿಯಾಗುವಂತೆ ಮಾಡಿಕೊಂಡನು. ತನ್ನ ಆರು ವರ್ಷದ ಮಗನಿಗೆ ಶಿಸ್ತು ಕಲಿಸುವಾಗ ಆ ಮಗುವೇ ತನಗೆ ಹಿಂದುರಿಗಿ ಹೊಡೆಯಲು ಕೈಎತ್ತಿದಾಗ, ಇನ್ನು ತಾನು ಇಲ್ಲಿ ಇರಬಾರದೆಂದು, ನಿರ್ಧರಿಸಿದಳು. ಈಗ ಅವಳು ಲಾಯರುಗಳನ್ನು ಸಂಪರ್ಕಿಸಿ, ತನಗಾದ ಅನ್ಯಾಯದ ವಿರುದ್ಧ ಹೋರಾಡಲು ಬೆಂಬಲವನ್ನು ಪಡೆಯುತ್ತಿದ್ದಾಳೆ. "ಈಗ ನನ್ನ ಮಗಳು, ಎಂದಾದರೂ ತನಗೆ ಇಂತಹ ಘಟನೆಯು ನಡೆದರೆ, ಪೊಲೀಸರನ್ನು ಕರೆಯುವಂತೆ ನನಗೆ ಹುರಿದುಂಬಿಸುತ್ತಾಳೆ." ಎಂದು ಕಣ್ಣಂಚಿನ ಕಣ್ಣೀರನ್ನು ಒರೆಸಿಕೊಂಡು ದುಃಖದೊಡನೆ ಬೆರೆತ ನಗುವನ್ನು ಬೀರುತ್ತಾ ಹೇಳುತ್ತಾಳೆ.

"ಒಬ್ಬ ಮಹಿಳೆ ಇಂತಹ ನರಕ ರೂಪದಲ್ಲಿ ಎಷ್ಟು ದೀರ್ಘಕಾಲ ಬಾಳುತ್ತಾಳೋ, ಅವಳಿಗೆ ಅದರಿಂದ ಹೊರಗೆ ಬರಲು ಅಷ್ಟೇ ಕಷ್ಟವಾಗುತ್ತದೆ." ಎಂದು ವೈದ್ಯಕೀಯ ಮನಶ್ಶಾಸ್ತ್ರಜ್ಞ ಜೀವ ಜ್ಯೋತ್ ಕೌರ್ ಹೇಳುತ್ತಾರೆ. ಇಂತಹ ನೊಂದ ಮಹಿಳೆಯರ ಅಳಲನ್ನು ಕೇಳುವವರಾರು? ಮೊದಮೊದಲು ತನಗಾದ ಅನ್ಯಾಯಕ್ಕೆ ಆಶ್ಚರ್ಯ ಪಡುತ್ತಾಳೆ, ವಿರೋಧಿಸುತ್ತಾಳೆ, ನಂತರ ಅವಳ ದಿನನಿತ್ಯದ ಚಟುವಟಿಕೆಗಳಲ್ಲಿ ಇದು ಒಂದಾಗಿ, ಅದನ್ನು ಪ್ರತಿಭಟಿಸಲಾಗದೆ ಹತಾಶಳಾಗಿ ಕಡೆಗೆ ನೊಂದು ಬೆಂದು ಜೀವನ ಸಾಗಿಸಲು ಪ್ರಯತ್ನಿಸುತ್ತಾಳೆ. ಇದಕ್ಕೆ ಕಾರಣ, ನಮ್ಮ ಮಹಿಳೆಯರು ಅವರಿಗೆ ಅಸಮರ್ಪಕವಾದ ವಾತಾವರಣವುಳ್ಳ ಸಂಸ್ಕೃತಿಯಲ್ಲಿ ಜೀವಿಸುತ್ತಾರೆ. ಆದರೆ, ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿನ ವಿರುದ್ಧ ದೌರ್ಜನ್ಯ ಎಲ್ಲೂ ಒಪ್ಪಿಕೊಂಡಿಲ್ಲ. ಇಷ್ಟಾದರೂ ಸಹ ಒಂದು ಹೆಣ್ಣನ್ನು ಕೇವಲ ಅವಳ ವೈವಾಹಿಕ ಜೀವನವನ್ನು ಗುರುತಿಸಿಯೇ ಅವಳಿಗೆ ಸ್ಥಾನಮಾನಗಳನ್ನು ಕೊಡುತ್ತಾರೆ. ತನ್ನ ಜೀವನವನ್ನು ಬದಲಾಯಿಸಿಕೊಳ್ಳಲು ಆಕೆಗೆ ಸಾಕಷ್ಟು ಮಾನಸಿಕ ಶಕ್ತಿ ಇರಬೇಕು. ಈ ಶಕ್ತಿಯು ನಿಧಾನವಾಗಿ ಬೆಳೆಯುತ್ತಿರುವಂತೆ ಭಾಸವಾಗುತ್ತದೆ. ಶರ್ಮಿಳೆಯು ತನಗಾದ ನಷ್ಟ, ಅನ್ಯಾಯವನ್ನು ಪ್ರತಿಭಟಿಸಿ, ಗಂಡನ ಮನೆಯನ್ನು ಬಿಟ್ಟು ಹೊರಡುವಾಗ, ಅವಳ ಅತ್ತೆ ಮಾವಂದಿರಾಗಲೀ, ಮತ್ಯಾರೂ ಅವಳಿಗೆ ಸಹಾಯ ಮಾಡಲು ಮುಂದಾಗಲಿಲ್ಲ. "ಮತ್ತೂ ಐದು ವರ್ಷಗಳಲ್ಲಿ ನನ್ನ ಜೀವನವು ಬದಲಾಗಿ, ಸುಖ ಕಾಣಬಹುದೆಂದು ಬಹಳ ನಿರಾಧಾರಿತ, ಹಾಗೂ ಜೀವನವು ಅತ್ಯಂತ ಮೌಲ್ಯವಾದುದು, ನನ್ನನ್ನು ಸ್ವಾರ್ಥಿ ಎಂದುಕೊಂಡರೂ ಸರಿ, ನಾನು ನನ್ನ ದಾರಿಯನ್ನು ಸುಗಮಗೊಳಿಸಿಕೊಳ್ಳುವಷ್ಟು ನನ್ನನ್ನು ಪ್ರೀತಿಸಬೇಕು, ಬೇರೆ ಯಾರೂ ನನ್ನನ್ನು ಪ್ರೀತಿಸದಿದ್ದರೂ ಸರಿ" ಎಂದೂ ಹೇಳುತ್ತಾಳೆ. ○

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಲಿ

ಮಹಿಳಾ ಸಶಕ್ತತಾ ದಿನಾಚರಣೆ : ಒಂದು ವರದಿ

❑ *ಜಯಶ್ರೀ*

ಕೊಡಗು ಜಿಲ್ಲಾ ಪಂಚಾಯತ್, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ 'ಜಾಗೃತ ಮಹಿಳಾ ವೇದಿಕೆ' ಜಂಟಿಯಾಗಿ ಏಪ್ರಿಲ್ 15, 2001ರಂದು ಮಹಿಳಾ 'ಸಶಕ್ತತಾ' ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಿತು. ಈ ದಿನದ ಪ್ರಯುಕ್ತ ಬೃಹತ್ ಮಹಿಳಾ ರ್‍ಯಾಲಿ ಹಾಗೂ ಸಮಾವೇಶವನ್ನು ಏರ್ಪಡಿಸುವುದರ ಜೊತೆಗೆ ಗೃಹಬಳಕೆ ವಸ್ತು ತಯಾರಿ ಶಿಬಿರವನ್ನು ಕೂಡಾ ಏರ್ಪಡಿಸಲಾಗಿತ್ತು.

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಮೋಟಮ್ಮನವರು, ರಾಜ್ಯ ಯೋಜನಾ ಖಾತೆ ಸಚಿವೆ ಸುಮಾ ವಸಂತಾ ಮತ್ತು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡಲು ಮುಖ್ಯ ಭಾಷಣಕಾರರಾಗಿ ರಾಜ್ಯ ರೈತ ಮಹಿಳಾ ಸಂಘದ ಸುನಂದ ಜಯರಾಂರವರು ಆಗಮಿಸಿದ್ದು ವಿಶೇಷ ವಾಗಿತ್ತು.

ಅಂದು ಬೆಳಿಗ್ಗೆ 9-30ಕ್ಕೆ ಬೃಹತ್ ಮಹಿಳಾ ರ್‍ಯಾಲಿಯನ್ನು ಸಚಿವೆ ಸುಮಾ ವಸಂತಾರವರು ಉದ್ಘಾಟಿಸಿದರೆ ಸಮಾವೇಶ ವನ್ನು ಸಚಿವೆ ಮೋಟಮ್ಮನವರು ಉದ್ಘಾಟಿಸಿದರು. ಕೊಡಗು ಜಿಲ್ಲಾ ಪಂಚಾಯತ್‌ನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಚ್. ಬಿ. ಜಯಮ್ಮನವರು ಗೃಹ ಬಳಕೆ ವಸ್ತು ತಯಾರಿ ಶಿಬಿರವನ್ನು ಉದ್ಘಾಟಿಸಿದರು.

ಮೋಟಮ್ಮನವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂದು ಕಾನೂನು ಪುಸ್ತಕದಲ್ಲಿ ಮಾತ್ರ ಲಭ್ಯವಿದ್ದು, ಮಹಿಳೆಯರು ನ್ಯಾಯದಿಂದ ವಂಚಿತರಾಗುತ್ತಿದ್ದಾರೆ. ಕಾನೂನಿಗೆ ಕಣ್ಣು ಹಾಗೂ ಮಾನವೀಯ ಹೃದಯ ಇದ್ದರೆ ಮಾತ್ರ ನ್ಯಾಯ ದೊರೆತೀತು. ಅತ್ಯಾಚಾರ ಪ್ರಕರಣಗಳಲ್ಲಿ ಅಪರಾಧಿಗೆ ಶಿಕ್ಷೆಯಾಗಬೇಕಾದರೆ ಸೂಕ್ತ ಸಾಕ್ಷ್ಯಾಧಾರ ಒದಗಿಸಬೇಕೆಂದು ಕೋರ್ಟಿನಲ್ಲಿ ಒತ್ತಾಯಿಸುತ್ತಾರೆ. ಆದರೆ ಅತ್ಯಾಚಾರಿಗಳು ಸಾಕ್ಷ್ಯಾಧಾರ ಇಟ್ಟುಕೊಂಡು ಈ ಕೃತ್ಯ ಎಸಗುತ್ತಾರೆಯೇ? ಅತ್ಯಾಚಾರ ಪ್ರಕರಣಗಳಲ್ಲಿ ಕಾನೂನು ಮಹಿಳೆಗೆ ನೆರವಾದ ನಿದರ್ಶನಗಳು ಎಷ್ಟಿರಬಹುದು. ಇಂತಹದ್ದರಲ್ಲಿ ಪ್ರತ್ಯಕ್ಷ ಸಾಕ್ಷಿ ಎಲ್ಲಿಂದ ತರುವುದು ಎಂದು ಕಟುವಾಗಿ ಪ್ರಶ್ನಿಸಿದರು.

ಮಹಿಳೆಗೆ ನಿರ್ದಿಷ್ಟವಾದ ಒಂದು ಕ್ಷೇತ್ರವಿದೆ ಎಂಬ ಗೊಡ್ಡು ನಂಬಿಕೆ ಈಗ ಬದಲಾಗಿದೆ. ಎಲ್ಲಾ ರಂಗದಲ್ಲೂ ಮಹಿಳೆ ಪುರುಷನಿಗೆ ಸಮನಾಗಿ ಸಾಧನೆ ಮಾಡುತ್ತಿದ್ದಾಳೆ. ಇಂದು ಮಹಿಳೆ ಸ್ವಶಕ್ತಿಯಿಂದ ಶಿಕ್ಷಣದ ಮೂಲಕ ಮುಂದೆ ಬಂದಿದ್ದಾಳೆ. ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಎಂಬ ನಾಣ್ಣುಡಿ ಕಾರ್ಯರೂಪಕ್ಕೆ ಬರಬೇಕಿದೆ ಎಂದ ಮೋಟಮ್ಮನವರು ಸ್ತ್ರೀಯರು ಭಾವನಾತ್ಮಕ ಸಂಬಂಧ ಹೊಂದಿದವರು. ಅವರ ಮೇಲೆ ಪುರುಷರು ಹೊಂದಿರುವ ನಿಕೃಷ್ಟ, ನಿರ್ದಯ ಮನೋಭಾವನೆಯನ್ನು ತ್ಯಜಿಸಬೇಕಿದೆ. ಮಹಿಳೆಗೆ ಮಹಿಳೆಯೇ ಆಧಾರವಾಗಬೇಕಿದೆ. ಝಾನ್ಸಿರಾಣಿ, ಕಿತ್ತೂರು ಚೆನ್ನಮ್ಮ, ಇಂದಿರಾಗಾಂಧಿ, ಮಾರ್ಗರೇಟ್ ಥ್ಯಾಚರ್, ಸಿರಿಮಾವೋ, ಭಂಡಾರನಾಯಕೆ, ಮದರ್ ತೆರೇಸಾ ಮುಂತಾದ ಮಹಿಳೆಯರು ಇಂದಿನ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಇವರೆಲ್ಲರೂ ತಮ್ಮ ಸ್ವಶಕ್ತಿಯಿಂದಲೇ ಮುಂದೆ ಬಂದವರು. ಆದರೂ ಈ ಪುರುಷ ಸಮಾಜ ಮಹಿಳೆಯರನ್ನು ಗುರುತಿಸಿದೆಯೇ? ಹೆಣ್ಣಿನಿಂದಲೇ ಹೆಣ್ಣು ಶೋಷಣೆಗೊಳಗಾಗುತ್ತಿದ್ದಾಳೆ ಎಂದು ದೂರ ಲಾಗುತ್ತಿದೆ. ಆದರೆ ವಾಸ್ತವ ಇದಲ್ಲ. ಇಂದಿಗೂ ಯಜಮಾನ ವ್ಯವಸ್ಥೆಯಲ್ಲಿ ಪುರುಷ ಪ್ರಧಾನವಾದ ಕುಟುಂಬವೇ ಇದಕ್ಕೆಲ್ಲಾ ಕಾರಣ. ಮಹಿಳೆಯರ ಮೇಲಾಗು ತ್ತಿರುವ ದೌರ್ಜನ್ಯವನ್ನು ತಡೆಗಟ್ಟಲು ಈ ಯಜಮಾನಿಕೆ ಯನ್ನೇಕೆ ಬಳಸುತ್ತಿಲ್ಲ ಎಂದು ಮಾರ್ಮಿಕವಾಗಿ ನುಡಿದರು. ಪುರುಷರಲ್ಲಿ ಪರಿವರ್ತನೆ ಆದಾಗ ಮಾತ್ರ ಹೆಣ್ಣುಮಕ್ಕಳ ಉನ್ನತಿ ಸಾಧ್ಯ ಎಂದು ಮೋಟಮ್ಮನವರು ನುಡಿದರು.

ತರಬೇತಿ, ಸಂಘಟನೆಗಳ ಮೂಲಕ ಮಹಿಳೆಯರು ಆತ್ಮಸ್ಥೈರ್ಯ, ಮಾನಸಿಕ ಧೈರ್ಯ ಗಳಿಸಿಕೊಳ್ಳಬೇಕು. ಸೂಕ್ತ ಅರಿವಿಲ್ಲದಿದ್ದರೆ ಸಂಕಷ್ಟಗಳನ್ನು ಎದುರಿಸುವಲ್ಲಿ ಮಹಿಳೆ ಅಸಹಾಯಕಳಾಗುತ್ತಾಳೆ. ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವಲ್ಲಿ ಹೆತ್ತವರು ಸೂಕ್ತ ಗಮನ ಹರಿಸಬೇಕು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಹೆಣ್ಣು ಶಕ್ತಳಾಗಬೇಕೆಂಬ ಹೆಬ್ಬಯಕೆ ಎಲ್ಲರಲ್ಲೂ ಮೂಡಬೇಕು. ಮಹಿಳೆಯರು ಸಶಕ್ತರಾಗಬೇಕಾದರೆ ಅವರಲ್ಲಿರುವ ಮಾನಸಿಕ ದೌರ್ಬಲ್ಯ ಗಳನ್ನು ಮೊದಲು ತೊಡೆದುಹಾಕಬೇಕೆಂದರು.

ಬೆಲೂನು ಹಾರಿ ಬಿಡುವ ಮೂಲಕ ಮಹಿಳಾ ರ್‍ಯಾಲಿಯನ್ನು ಉದ್ಘಾಟಿಸಿದ ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ಸಚಿವೆ ಹಾಗೂ ಜಾಗೃತ ಮಹಿಳಾ ವೇದಿಕೆಯ ಮಹಾ ಪೋಷಕರೂ ಆಗಿರುವ ಸುಮಾ ವಸಂತಾರವರು ಸಮಾರಂಭದಲ್ಲಿ ಭಾಗವಹಿಸಿ

ಮಾತನಾಡುತ್ತಾ ಸರ್ಕಾರದ ಸವಲತ್ತುಗಳನ್ನು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಳ್ಳುವಲ್ಲಿ ಮಹಿಳೆಯರಿಂದು ಮುಂದೆ ಬಂದು ಸ್ವಯಂ ಅಭಿವೃದ್ಧಿ ಹೊಂದಿಕೊಳ್ಳಬೇಕು. ಮಹಿಳಾ ಸಶಕ್ತತಾ ವರ್ಷದಲ್ಲಿ ಮಹಿಳೆಯರೆಲ್ಲಾ ಸಂಘಟನಾತ್ಮಕವಾಗಿ ಬಲಶಾಲಿಗಳಾಗಿ ಬೆಳೆಯುಬೇಕೆಂದರು. ಸರ್ಕಾರದ ಯೋಜನೆಗಳನ್ನು ಮಹಿಳೆಯರಿಗೆ ಪರಿಚಯಿಸುವಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದರು. ಸಂಸಾರವನ್ನು ಎಷ್ಟು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತೀರೋ ಅಷ್ಟೇ ಸುಸೂತ್ರವಾಗಿ ಈ ಸಮಾಜವನ್ನು ಕೂಡಾ ನಡೆಸುವ ಸಾಮರ್ಥ್ಯ ಮಹಿಳೆಯರಿಗಿದೆ ಎಂಬುದನ್ನು ಅವರು ಇಂದು ತೋರಿಸಿ ಕೊಡಬೇಕಾಗಿದೆ.

ಭಾರತದ ಚರಿತ್ರೆಯನ್ನು ಅವಲೋಕಿಸಿದಾಗ ಬಹಳಷ್ಟು ಮಹಿಳೆಯರು ಸ್ವಸಾಮರ್ಥ್ಯದಿಂದ ಮುಂದೆ ಬಂದಿದ್ದಾರೆ ಮಾತ್ರವಲ್ಲ, ಇದರೊಂದಿಗೆ ಹಲವು ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಗಳನ್ನು ಕೂಡಾ ಮಾಡಿದ್ದಾರೆ. ಗ್ರಾಮ ಮಹಿಳೆಯರನ್ನು ಒಗ್ಗೂಡಿಸಿ ಸಂಘಟನೆಯ ಮುಂಚೂಣಿಗೆ ತರುವ ಕೆಲಸವನ್ನು ಜಾಗೃತ ಮಹಿಳಾ ವೇದಿಕೆಯಂತಹ ಸಂಘಟನೆಗಳು ಇನ್ನು ಹೆಚ್ಚು ಹೆಚ್ಚಾಗಿ ಮಾಡಬೇಕಾಗಿದೆ ಎಂದು ವೇದಿಕೆಯ ಕೆಲಸಕಾರ್ಯದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ರಾಜ್ಯ ರೈತ ಮಹಿಳಾ ಸಂಘದ ನಾಯಕಿಯಾದ ಸುನಂದ ಜಯರಾಂರವರು ಸಮಾರಂಭದ ಪ್ರಮುಖ ಭಾಷಣಕಾರರಾಗಿ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತಾ, ಮಹಿಳಾ ಸಬಲೀಕರಣಕ್ಕಾಗಿ ಆರ್ಥಿಕ ಸ್ವಾವಲಂಬನೆ, ಸ್ವಂತ ಉದ್ಯೋಗ, ಅರಿವಿಗಾಗಿ ಶಿಕ್ಷಣ ಮತ್ತು ಇದರೊಂದಿಗೆ ಭೂಮಿಯ ಮೇಲಿನ ಹಕ್ಕು ಅಥವಾ ಒಡೆತನ ಆಕೆಯನ್ನು ಹೆಚ್ಚು ಸಬಲೆಯನ್ನಾಗಿಸುತ್ತದೆ ಎಂದರು. ಮಹಿಳೆಯರು ಸಂಘಟಿತರಾಗುವುದರೊಂದಿಗೆ ಮೌಢ್ಯತೆಯನ್ನು ತೊರೆಯಬೇಕು. ಸಾಸಿವೆ ಡಬ್ಬದಿಂದ ಸ್ವ-ಸಹಾಯ ಗುಂಪುಗಳವರೆಗೆ ಸಂಘಟಿತರಾದ ಮಹಿಳೆಯರು ಜಾತಿ ಪದ್ಧತಿಯ ಕ್ರೌರ್ಯ, ಅಶ್ಲೀಲ ಭಿತ್ತಿಪತ್ರಗಳು, ಮಹಿಳೆಯರ ಘನತೆ ಗೌರವಕ್ಕೆ ಕುಂದುಂಟಾಗುವ ಪುಸ್ತಕ, ವಿಚಾರ, ಘಟನೆಗಳ ವಿರುದ್ಧ ಜಾಗೃತರಾಗಬೇಕಾಗಿದೆ ಎಂದ ಅವರು ಉತ್ತಮ ಪುಸ್ತಕಗಳನ್ನು ಹಾಗೂ ದಿನಪತ್ರಿಕೆಗಳನ್ನು ಓದುವ ಅಭ್ಯಾಸ ಇಟ್ಟುಕೊಳ್ಳುವುದರೊಂದಿಗೆ ಐತಿಹಾಸಿಕ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಅರಿತುಕೊಳ್ಳುವುದು ಅವಶ್ಯಕ ಎಂದರು. ಮಹಿಳಾ ಸಂಘಟನಾ ರ್‍ಯಾಲಿ, ಸಮಾವೇಶ, ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ ಎಂದರು. ಮಹಿಳೆಯರನ್ನು ದೇವತೆಗಳೆಂದ ಈ ದೇಶದಲ್ಲೇ ಸತಿಸಹಗಮನದಂತಹ ಕ್ರೌರ್ಯ ನಡೆದ ವೈರುದ್ಯಗಳಿವೆ ಎಂದರು. ಮಹಿಳೆ ಕುಟುಂಬ, ಸಮುದಾಯ ಹಾಗೂ ಸರ್ಕಾರದಿಂದ ನಿಯಂತ್ರಿಸಲ್ಪಟ್ಟಿದ್ದಾಳೆ. ಇದರಿಂದ ಮಹಿಳೆಯ ಸಬಲೀಕರಣ ಅಸಾಧ್ಯ ಎಂದರು. ಮಹಿಳೆ ಈವತ್ತು ಕುಟುಂಬ, ಸಮಾಜ ಹಾಗೂ ರಾಷ್ಟ್ರದ ಸಂಕೇತವಾಗಿದ್ದಾಳೆ. ಆದರೆ ಇಡೀ ವ್ಯವಸ್ಥೆಯ ಮೂಲಭೂತ ಬದಲಾವಣೆಯ ಹೊರತು ಸ್ವಾವಲಂಬನೆ, ಸಬಲೀಕರಣದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗುತ್ತದೆ ಎಂದರು. ಸಮಾನತೆಯನ್ನು ಯಾವುದೇ ಪೈಪೋಟಿಯಿಂದ ಪಡೆಯಲು ಯತ್ನಿಸದೆ ಕಾನೂನಿನ ಮೂಲಕ ಹಾಗೂ ಸೌಹಾರ್ದಯುತವಾಗಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಯತ್ನಿಸಬೇಕು ಎಂದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಪಂಚಾತ್ ಸದಸ್ಯ ಹಾಗೂ ಜಾ.ಮ. ವೇದಿಕೆಯ ಸಲಹೆಗಾರರೂ ಆಗಿರುವ ವಿ. ಪಿ. ಶಶಿಧರ್‌ರವರು ಮಾತನಾಡಿ ಇಂದಿನ ಈ ಸನ್ನಿವೇಶದಲ್ಲಿ ಶಿಕ್ಷಣ ಹಾಗೂ ಆತ್ಮವಿಶ್ವಾಸ ಸಂಘಟನಾತ್ಮಕ ಹೋರಾಟಕ್ಕೆ ಅತೀ ಮುಖ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿ. ಪಂ. ಅಧ್ಯಕ್ಷರು ಹಾಗೂ ಜಾ. ಮ. ವೇದಿಕೆಯ ಮಹಾ ಪೋಷಕರೂ ಆಗಿರುವ ಕೆ. ಪಿ. ಚಂದ್ರಕಲಾರವರು ಮಾತನಾಡಿ ರಾಜ್ಯ ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಜಿ. ಪಂ. ಮಹಿಳೆಯರ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದರು.

ಮಹಿಳೆಯರ ಕರಕುಶಲ ವಸ್ತುಪ್ರದರ್ಶನ ಮತ್ತು ಗೃಹಬಳಕೆ ವಸ್ತು ತಯಾರಿ ಶಿಬಿರವನ್ನು ಜಿ. ಪಂ. ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಜಾ.ಮ. ವೇದಿಕೆಯ ಸಲಹೆಗಾರರು ಆಗಿರುವ ಎಚ್. ಬಿ. ಜಯಮ್ಮನವರು ಉದ್ಘಾಟಿಸಿದರು.

ಗೃಹ ಬಳಕೆ ವಸ್ತು ತಯಾರಿ ಶಿಬಿರವನ್ನು ನಡೆಸಿಕೊಂಡು ವಂದನಾ ಟ್ರಸ್ಟ್‌ನ ರಮಾನಂದ್, ಗಿರಿಜ, ಸಮುಚ್ಛಯ ತರಬೇತಿ ಸಂಸ್ಥೆಯ ಉಮಾಶಂಕರ್ ಪೆರಿಯೋಡಿ, ಸಿಂಪನಿ, ಪತ್ರಿಕೆಯ ಸಂಪಾದಕರಾದ ವಾಣಿ ಇವರುಗಳು ಆಗಮಿಸಿದ್ದರು.

ಮಹಿಳಾ ಸಂಘ ಸಂಸ್ಥೆಗಳು, ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಇಲಾಖಾ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಸಾರ್ವಜನಿಕರೆಲ್ಲರೂ ಭಾಗವಹಿಸಿ ತನುಮನ ಧನದಿಂದ ಸಹಕರಿಸಿ ಯಶಸ್ವಿ ಕಂಡ ಈ ಅಭೂತ ಪೂರ್ವ ಹಾಗೂ ಕೊಡಗಿನ ಇತಿಹಾಸದಲ್ಲೇ ಪ್ರಪ್ರಥಮವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು 1200ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿತ್ತು.

○

ಭೂಮಿ ಗಾಥೆ

❑ ಡಾ|| ವಸುಂಧರಾ ಭೂಪತಿ

ಮಧ್ಯಾಹ್ನ ಒಂದೂವರೆಯಾಗುತ್ತ ಬಂದಿತ್ತು. ಹೊಟ್ಟೆ ಚುರುಗುಟ್ಟುತ್ತಿತ್ತು. ಮನೆಗೆ ಹೋಗಬೇಕೆಂದುಕೊಳ್ಳುತ್ತಿರುವಾಗ "ಮೇಡಂ, ನಿಮ್ಮನ್ನು ಹುಡುಕಿಕೊಂಡು ಯಾರೋ ಬಂದಿದ್ದಾರೆ" ಎಂದು ಅರುಣ ಹೇಳಿದಾಗ "ಕಳಿಸಿ" ಎಂದೆ. ಒಬ್ಬ ಮಧ್ಯವಯಸ್ಸಿನ ಹೆಂಗಸು ಒಳಗಡೆ ಬಂದು,

"ನಮಸ್ಕಾರ ಡಾಕ್ಟ್ರೇ, ನನ್ನ ಹೆಸರು ಸರೋಜಮ್ಮ. ಯಲಹಂಕದಲ್ಲಿ ಒಂದು ಅನಾಥಾಶ್ರಮ ನಡೆಸ್ತಿದೀನಿ. ನಾನು ಶಾರದಾ ಅವರ ಗೆಳತಿ. ಅವರೇ ನಿಮ್ಮ ವಿಳಾಸ ಕೊಟ್ಟು ಕಳಿಸಿದರು."

"ಹೌದಾ! ಏನು ವಿಷಯ? ನಿಮಗೇನು ತೊಂದರೆಯಿದೆ?"

"ನನಗೇನೂ ತೊಂದರೆಯಿಲ್ಲ ಡಾಕ್ಟ್ರೇ, ನಮ್ಮ ಅನಾಥಾಶ್ರಮಕ್ಕೆ ಒಬ್ಬಳು ಹೊಸ ಹುಡುಗಿ ಸೇರ್ಪಡೆಯಾಗಿದ್ದಾಳೆ. ಅವಳನ್ನ ತೋರಿಸೋಣವೆಂದು ಕರೆದುಕೊಂಡು ಬಂದಿದೀನಿ."

"ಹಾಗಾದರೆ ಎಲ್ಲಿ ಆ ಹುಡುಗಿ? ಕರೆಯಿರಿ."

"ಡಾಕ್ಟ್ರೇ, ಅವಳನ್ನು ತಪಾಸಣೆ ಮಾಡುವ ಮೊದಲು ಅವಳ ಹಿನ್ನಲೆಯನ್ನು ನಿಮಗೆ ಹೇಳಬೇಕು. ಈ ಹುಡುಗಿ ನೆಲಮಂಗಲದ ಹತ್ತಿರದ ಹಳ್ಳಿಯವಳು. ಅಪ್ಪ ಕುಡುಕನಂತೆ. ಅಮ್ಮ ಅವನ ಕಾಟ ತಡೆಯಲಾರದೇ ಯಾರೊಂದಿಗೊ ಓಡಿ ಹೋಗಿದ್ದಾಳೆ. ಇವಳೇ ದೊಡ್ಡಮಗಳು. ತಮ್ಮ, ತಂಗಿ ಇದ್ದಾರಂತೆ. ಅಜ್ಜಿಯೋ ಇವರನ್ನೆಲ್ಲ ನೋಡಿಕೊಳ್ಳುತ್ತಿದ್ದಳಂತೆ. ಮಕ್ಕಳನ್ನು ದಿನಾಲೂ ಬೈಯೋದು, ಹೊಡೆಯೋದು ಮಾಡ್ತಿದ್ದಳಂತೆ. ತಂದೆಯ ಹಾಗೂ ಅಜ್ಜಿಯ ಜಗಳ ನೋಡಲಾರದೇ ಬೇಸರದಿಂದ ಬೆಂಗಳೂರಿಗೆ ಬರಬೇಕೆಂದು ಮನೆಬಿಟ್ಟು ಹೊರಟಿದ್ದಾಳೆ. ಕೈಯಲ್ಲಿ ಕಾಸಿಲ್ಲ. ನಡೆಯುತ್ತಾ ಬಂದಿದ್ದಾಳೆ ರಾತ್ರಿ ಎಲ್ಲೋ ಒಂದೆಡೆ ಮರದಡಿ ಮಲಗಿದ್ದಾಳೆ. ಹೊಟ್ಟೆ ಹಸಿವು ಬೇರೆ, ಅಂತಹದರಲ್ಲಿ ಎರಡು ಗಂಡು ಪ್ರಾಣಿಗಳು ಇವಳ ಮೇಲೆ ಅತ್ಯಾಚಾರ ಎಸಗಿವೆ. ಇವಳ ಕೂಗಿಗೆ, ಅಳುವಿಗೆ ಸುತ್ತಲಿನ ಪರಿಸರ ಮಾತ್ರ ಮೂಕಸಾಕ್ಷಿಯಾಗಿತ್ತೇನೋ. ಅತ್ಯಾಚಾರಕ್ಕೊಳಗಾದ ಈ ಹುಡುಗಿ ಇನ್ನೂ 'ಋತುಮತಿ'ಯಾಗಿಲ್ಲ. ಮೈಮೇಲೆಲ್ಲ ಗಾಯ, ಹಾಗೆಯೇ ಅಲ್ಲಿ ಅಳುತ್ತ ಕುಳಿತಿದ್ದಳಂತೆ ಬೆಳಿಗ್ಗೆ ಯಾರೋ ಇವಳನ್ನು ನೋಡಿ ನಮ್ಮ ಅನಾಥಾಶ್ರಮಕ್ಕೆ ಕರೆತಂದು ಬಿಟ್ಟುಹೋಗಿದ್ದಾರೆ. ನಮ್ಮಲ್ಲಿಗೆ ಬಂದಾಗ ಈ ಹುಡುಗಿಗೆ ಮಾತನಾಡುವಷ್ಟೂ ಶಕ್ತಿಯಿರಲಿಲ್ಲ. ಮೊದಲು ಅವಳಿಗೆ ಸ್ನಾನ ಮಾಡಿಸಿ ಹೊಟ್ಟೆ ತುಂಬ ಊಟ ಕೊಟ್ಟು ಮಲಗಿಸಿದೆವು. ಗಾಯಗಳಿಗೆಲ್ಲ ಔಷಧಿ ಹಚ್ಚಿದೆವು. ಅವಳು ಚೇತರಿಸಿಕೊಳ್ಳಲು ಎರಡು ಮೂರು ದಿನಗಳು ಬೇಕಾಯಿತು. ನಂತರ ಮುಖದಲ್ಲಿ ಸ್ವಲ್ಪ ಗೆಲುವು ಕಾಣಿಸಿತು. ಯಾರಾದರೂ ಗಂಡಸರು ಹತ್ತಿರಬಂದರೆ ಕಿರುಚಾಡುತ್ತಾಳೆ. ನಿಧಾನವಾಗಿ ನಾವು ಕೇಳಿದಾಗ ಎಲ್ಲವನ್ನು ಹೇಳಿಕೊಂಡು ಅತ್ತಳು. ಈಗಲೂ ಅವಳಿಗೆ ನೋವು, ಉರಿ ಇದೆಯೆಂದು ಹೇಳುತ್ತಾಳೆ. ಅದಕ್ಕೆ ನಿಮ್ಮಲ್ಲಿಗೆ ಚಿಕಿತ್ಸೆಗೆ ಕರೆತಂದೆ."

ಆ ಪುಟ್ಟು ಹುಡುಗಿಯ ಕಥೆ ಕೇಳಿ ನನ್ನ ಮನಸ್ಸಿಗಾದ ನೋವು ಅಷ್ಟಿಷ್ಟಲ್ಲ. ಅವಳು ಅನುಭವಿಸಿದ ಯಾತನೆಯ ಆಳ ಎಷ್ಟೆಂದು ಅರ್ಥಮಾಡಿಕೊಳ್ಳುವುದು ಕಷ್ಟವೆನಿಸಿತು.

"ಬಾಮ್ಮ ಕುಳಿತುಕೋ" ಹನ್ನೊಂದು ವರ್ಷದ ಹುಡುಗಿಯ ಮುಖದಲ್ಲಿ ಮುಗ್ಧ ಕಳೆ. ಇವಳ ದೇಹಕ್ಕೆ, ಮನಸ್ಸಿಗೆ ಆಘಾತ ಉಂಟು ಮಾಡಿದವರು ಮನುಷ್ಯರೋ ಅಲ್ಲ ರಾಕ್ಷಸರೇ ಇರಬೇಕು.

"ನಿನ್ನ ಹೆಸರೇನು ಪುಟ್ಟಿ?"

"ಸುಮ"

ಎಂತಹ ಮುದ್ದಾದ ಹೆಸರು. ನಿಧಾನವಾಗಿ ಅರಳಬೇಕಾದ ಸುಮವನ್ನು ಬಲವಂತವಾಗಿ ಹಿಸುಕಿ ಹಾಕಿದವರಿಗೆ ಅಕ್ಕ, ತಂಗಿ, ತಾಯಿ, ಮಗಳು ಇದ್ದಿರಲಾರರೆ? ಅವಳ ದೇಹಕ್ಕಾದ ಗಾಯವನ್ನೇನೋ ವಾಸಿ ಮಾಡಬಹುದು. ಆದರೆ ಅವಳ ಮನಸ್ಸಿಗಾದ ಗಾಯ ಜೀವನಪೂರ್ತಿ ಉಳಿಯುತ್ತದಲ್ಲವೆ? ಗಂಡಸರು ತಮ್ಮ ಲೈಂಗಿಕ ರೋಗಗಳು ಹಾಗೂ ಏಡ್ಸ್‌ನ್ನು ಕಳೆದುಕೊಳ್ಳಲು ಇಂತಹ ಪುಟ್ಟಮಕ್ಕಳೊಂದಿಗೆ ಲೈಂಗಿಕ ಸಂಪರ್ಕ ಮಾಡುವರೆನ್ನುವ ವಿಷಯ ತಿಳಿಯದ್ದೇನಲ್ಲ. ತಮ್ಮ ಕಾಯಿಲೆ ವಾಸಿಯಾಗೋದಿರಲಿ, ಇವರಿಗೂ ಕಾಯಿಲೆ ಅಂಟಿಸುವರಲ್ಲ, ಅಂಧಕಾರಕ್ಕೆ ತಳ್ಳುವರಲ್ಲ. ಸುಮಳಂತಹ ನಿರ್ಗತಿಕ ಹುಡುಗಿಯರು ಪ್ರಪಂಚದಲ್ಲಿ ಸಾವಿರಾರು ಜನರಿರಬಹುದು. ಗಂಡಸರೇ! ಅಂತಹವರಿಗೆ ಸಹಾಯ ಮಾಡಲಾಗದಿದ್ದರೆ ಬೇಡ. ಆದರೆ ಬಲವಂತವಾಗಿ ಮೊಗ್ಗಾಗಿರುವಾಗಲೇ ಅವಳನ್ನು ಹೊಸಕಿ ಹಾಕಬೇಡಿ. ○

ಮನೆಗೆಲಸ ಮಾಡುವ ಮಹಿಳೆಯರ ಸಂಘಟನೆ

ಮನೆಗೆಲಸ ಮಾಡುವ ಸ್ತ್ರೀಯರು ಸದಾ ಪರದೆಯ ಹಿಂದಿರುತ್ತಾರೆ. ಅವರ ಧ್ವನಿ ಯಾರಿಗೂ ಕೇಳಿಸಲಾರದು. ಅವಳ ಕೆಲಸವನ್ನೂ ಯಾರೂ ಗುರುತಿಸಲಾರರು. ಅವಳ ಶ್ರಮವನ್ನು ನಿರ್ಲಕ್ಷಿಸಲಾಗುತ್ತಿದೆ. ಮನೆಗೆಲಸ ಮಾಡುವವರಲ್ಲಿ ಶೇ. 90 ಭಾಗ ಮಹಿಳೆಯರು. ಭಾರತದಲ್ಲಿ ಮನೆಗೆಲಸ ಮಾಡುವವರಲ್ಲಿ ಶೇ. 20ರಷ್ಟು ಮಕ್ಕಳು 14 ವರ್ಷಕ್ಕಿಂತ ಚಿಕ್ಕ ವಯಸ್ಸಿನವರು. ಕಾನೂನಿನ ಪ್ರಕಾರ ಅವರನ್ನು ಕೆಲಸಗಾರರೆಂದು ಗುರುತಿಸಲಾಗುವುದಿಲ್ಲ. ಕೆಲಸಗಾರರಿಗೆ ದೊರೆಯಬೇಕಾದ ಹಕ್ಕುಬಾಧ್ಯತೆಗಳನ್ನು ಸಹ ವಂಚಿಸಲಾಗುತ್ತಿದೆ.

ಮನೆಗೆಲಸ ಮಾಡುವ ಮಹಿಳೆಯರ ಸಮಸ್ಯೆ ಹಾಗೂ ಹಕ್ಕು ಬಾಧ್ಯತೆಗಳನ್ನು ಗುರುತಿಸುವ ಉದ್ದೇಶದಿಂದ 1985ರಲ್ಲಿ "ರಾಷ್ಟ್ರೀಯ ಮನೆಗೆಲಸ ಮಾಡುವ ಮಹಿಳೆಯರ ಚಳುವಳಿಯನ್ನು ಭಾರತದಲ್ಲಿ ಹುಟ್ಟುಹಾಕಲಾಯಿತು. ಕರ್ನಾಟಕದಲ್ಲಿ 1992ರಲ್ಲಿ ಈ ಚಳುವಳಿ ತನ್ನ ನೆಲೆಯನ್ನು ಕಂಡುಕೊಂಡಿತು.

ಉತ್ಪಾದನೆಗೆ ಹಾಗೂ ಉತ್ತಮ ಗುಣಮಟ್ಟದ ಜೀವನ ಶೈಲಿಗೆ ಮೌನವಾಗಿಯೇ ತಮ್ಮ ಕೊಡುಗೆಯನ್ನು ನೀಡುವ ಮನೆಗೆಲಸ ಮಾಡುವ ಮಹಿಳೆಯರ ಘನತೆಯನ್ನು ಕಾಪಾಡುವುದು, ಹಾಗೂ ಮನೆಗೆಲಸ ಮಾಡುವ ಪ್ರತಿಯೊಬ್ಬ ಮಹಿಳೆಯರ ಗೌರವ ಕಾಪಾಡುವುದು, ಅವಳ ಸಶಕ್ತತೆಗೆ ಪೂರಕವಾದ ವಾತಾವರಣವನ್ನು ನಿರ್ಮಾಣಮಾಡುವುದು. ಅವರ ಹಕ್ಕು ಭಾಧ್ಯತೆಗಳಿಗಾಗಿ ಹೋರಾಡುವುದು ಈ ಚಳುವಳಿಯ ಮುಖ್ಯ ಉದ್ದೇಶವಾಗಿದೆ.

ಮನೆಗೆಲಸ ಮಾಡುವ ಮಹಿಳೆಯರು ಎದುರಿಸುವ ಸಮಸ್ಯೆಗಳು ಹಲವಾರು. ಅವರಿಗೆ ನ್ಯಾಯಯುತವಾದ ವೇತನವನ್ನು ಸಹ ನೀಡಲಾಗುವುದಿಲ್ಲ. ಅಗತ್ಯವಾದಷ್ಟು ವಿಶ್ರಾಂತಿಯು ದೊರಕುವುದಿಲ್ಲ. ಅವರಿಗೆ ರಜಾದಿನಗಳನ್ನು ಸಹ ನೀಡಲಾಗುವುದಿಲ್ಲ. ಸದಾ ಬೈಗುಳ, ದೈಹಿಕ ಹಿಂಸೆ, ಲೈಂಗಿಕ ಹಿಂಸೆ, ಮುಂತಾದವುಗಳಿಂದ ನರಳಬೇಕಾಗುತ್ತದೆ. ಅವರಿಗೆ ಮೊದಲೇ ತಿಳಿಸದೇ ಕೆಲಸದಿಂದ ತೆಗೆದುಹಾಕಲಾಗುತ್ತದೆ. ಕೆಲವೊಮ್ಮೆ ಅವರಿಗೆ ನೀಡಬೇಕಾದ ವೇತನವನ್ನು ಸಹ ನೀಡದೆ ಕೆಲಸದಿಂದ ತೆಗೆದುಹಾಕಲಾಗುತ್ತದೆ.

ಸರ್ಕಾರವಾಗಲೀ, ಮನೆಯ ಒಡೆಯ ಅಥವಾ ಒಡತಿಯರಾಗಲಿ, ಮನೆಗೆಲಸ ಮಾಡುವ ಮಹಿಳೆಯರನ್ನು 'ಕೆಲಸಗಾರರೆಂದು' ಅರ್ಥೈಸುವುದಿಲ್ಲ. ರಾಜಕೀಯ ಪಕ್ಷಗಳಿಗೆ ಇವರು ಮತ ಚಲಾಯಿಸುವ ಓಟ್ ಬ್ಯಾಂಕ್ ಆಗಿದ್ದರೂ, ಇವರ ಸಮಸ್ಯೆಯನ್ನು ಗುರುತಿಸುವ ಪ್ರಯತ್ನವನ್ನು ಯಾವ ರಾಜಕೀಯ ಪಕ್ಷಗಳೂ ಮಾಡಿಲ್ಲ. ಮನೆಗೆಲಸ ಮಾಡುವ ಮಹಿಳೆಯರ ವಸತಿ, ವಿದ್ಯಾಭ್ಯಾಸ, ಆರೋಗ್ಯ ಮುಂತಾದ ಸಮಸ್ಯೆಗಳನ್ನು ಯಾರು ಗಮನಿಸುತ್ತಿಲ್ಲ. ಸಮಾಜ ಅವರನ್ನು 'ಉಂಡು ಬಿಸಾಡುವ ಎಲೆಯಂತೆ' ಅವರನ್ನು ಉಪಯೋಗಿಸುತ್ತದೆ. ಚಳುವಳಿಯ ಮೂಲಕ ಮನೆಗೆಲಸ ಮಾಡುವ ಮಹಿಳೆಯರ ಗೌರವ ಹಾಗೂ ಘನತೆಯನ್ನು ಎತ್ತಿಹಿಡಿಯುವ ಕೂಗು ಸರ್ಕಾರಕ್ಕೆ ಕೇಳಿಸುವುದಿಲ್ಲ. ಮನೆ ಒಡೆಯರು, ಅಥವಾ ಒಡತಿಯರು ಸದಾ ಜಯಗಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಮನೆಗೆಲಸದವರನ್ನು ಶೋಷಿಸುವ ಒಂದು ಪ್ರಮುಖ ವಿಧಾನವೆಂದರೆ ಕಳ್ಳತನದ ಆರೋಪ. ಇಂತಹ ಬಹುಪಾಲು ಆರೋಪ ಸುಳ್ಳು ಆರೋಪಗಳಾಗಿರುತ್ತವೆ. ಬಹುಪಾಲು ಘಟನೆಗಳಲ್ಲಿ ಇವರು ನಿರಪರಾಧಿಯಾಗಿರುತ್ತಾರೆ. ಈ ಸುಳ್ಳು ಆರೋಪದ ಹಿಂಸೆಯನ್ನು ತಡೆಯಲಾರದೆ ಎಷ್ಟೋ ಮನೆಗೆಲಸದ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇತ್ತೀಚಿಗೆ ಒಂದು ಮನೆಯಲ್ಲಿ 150/- ರೂ. ಕಳೆದುಹೋಗಿತ್ತು. ಆ ಮನೆಯಲ್ಲಿ ಕೆಲಸ ಮಾಡುವ ಹುಡುಗಿಯ ಮೇಲೆ ಈ ಆರೋಪವನ್ನು ಹೊರಿಸಲಾಯಿತು. ಪೊಲೀಸ್‌ಗೆ ದೂರು ನೀಡಲಾಯಿತು. ಮನೆಗೆಲಸ ಮಾಡುವ ಆ ಹುಡುಗಿ ಆತ್ಮಹತ್ಯೆ ಮಾಡಿಕೊಂಡಳು. ಇಂತಹ ನಿದರ್ಶನಗಳು ಬಹಳಷ್ಟಿವೆ.

ಮನೆಗೆಲಸ ಮಾಡುವ ಮಹಿಳೆಯರ ಶೋಷಣೆಯ ವಿರುದ್ಧ ಹೋರಾಡಲು ಹಾಗೂ ಅವರ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹಲವು ಹಂತದಲ್ಲಿ ಚಳುವಳಿಯು ಪ್ರಯತ್ನವನ್ನು ಮಾಡುತ್ತಿದೆ. ಅವರ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸಿ, ಅವರನ್ನು ಸಶಕ್ತರನ್ನಾಗಿಸುವುದು ಜನಸಾಮಾನ್ಯರಲ್ಲಿ ಅವರ ಸ್ಥಿತಿಗತಿಯ

ಬಗ್ಗೆ ಅರಿವು ಮೂಡಿಸಿ ಅವರಿಗೆ ಸಂಪೂರ್ಣ ಬೆಂಬಲ ನೀಡುವಂತೆ ಮಾಡುವುದು. ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯ ಮುಖಾಂತರ ಮನೆಗೆಲಸ ಮಾಡುವ ಮಹಿಳೆಯರ ಕೆಲಸವನ್ನು ಕಾನೂನು ಬದ್ಧಗೊಳಿಸಲು ಹಾಗೂ ಅವರಿಗೆ ರಕ್ಷಣೆ, ಇತರೆ ಸೌಲಭ್ಯಗಳು ದೊರೆಯುವಂತೆ ಒತ್ತಡ ಹಾಕುವುದು, ಮುಂತಾದ ಉದ್ದೇಶಗಳಿಂದ ಮನೆಗೆಲಸ ಮಾಡುವ ಮಹಿಳೆಯರನ್ನು ಸಂಘಟನೆ ಮಾಡಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಈ ಸಂಘಟನೆಯ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

* ಮನೆಗೆಲಸ ಮಾಡುವ ಮಹಿಳೆಯರ ಹಕ್ಕುಬಾಧ್ಯತೆಗಳು ಉಲ್ಲಂಘನೆಯಾದಂತಹ ಸಂದರ್ಭದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು.
* ಮನೆಗೆಲಸ ಮಾಡುವ ಮಹಿಳೆಯರ ವೈಯಕ್ತಿಕ ಪರಿಚಯ ಮಾಡಿಕೊಳ್ಳುವುದು.
* ಮನೆಗೆಲಸ ಮಾಡುವ ಮಹಿಳೆಯರ ಸ್ಥಿತಿಗತಿಯ ಬಗ್ಗೆ ಜನಜಾಗೃತಿ ಮೂಡಿಸುವುದು.
* ಅವರ ಸ್ಥಾನಮಾನವನ್ನು ಕುರಿತು ದಾಖಲಿಸುವುದು ಹಾಗೂ ಪ್ರಕಟಿಸುವುದು.
* ಅವರ ಸ್ಥಿತಿಗತಿಯನ್ನು ಕುರಿತು ಅಧ್ಯಯನ ಹಾಗೂ ಸಮೀಕ್ಷೆ ನಡೆಸುವುದು.
* ಇತರ ಸಂಘಟನೆ ಹಾಗೂ ಗುಂಪುಗಳೊಡನೆ ಸಂವಾದ ಚರ್ಚೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದು.

ಇತ್ತೀಚಿಗೆ ಕರ್ನಾಟಕ ಸರ್ಕಾರ ರೂಪಿಸಿದ ಅಸಂಘಟಿತ ಕಾರ್ಮಿಕ "ಮಸೂದೆ 2000." "ಮಸೂದೆ ಆಶಾದಾಯಕ ವಾಗಿದೆ. ಈ ಮಸೂದೆಯು ಮನೆಗೆಲಸ ಮಾಡುವ ಮಹಿಳೆಯರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸುತ್ತದೆ. ಈ ಮಸೂದೆಯನ್ನು ಸುದೀರ್ಘವಾಗಿ ಅಧ್ಯಯನ ಮಾಡಲಾಗಿದೆಯಲ್ಲದೆ, ಮನೆಗೆಲಸ ಮಾಡುವ ಮಹಿಳೆಯರಿಗೆ ಮಸೂದೆಯನ್ನು ಕುರಿತು ಮಾಹಿತಿ ನೀಡಿ, ಅವರ ಪ್ರತಿಕ್ರಿಯೆಯನ್ನು ಸಂಗ್ರಹಿಸಲಾಗಿದೆ. ಈ ಮಸೂದೆಯನ್ನು ಕುರಿತು ಒಂದು ವರದಿಯನ್ನು ಲೇಬರ್ ಕಮಿಷನರ್ ಹಾಗೂ ಕಾರ್ಯದರ್ಶಿಯವರಿಗೆ ನೀಡಲಾಗಿದೆ. ಈ ಕರಡು ಮಸೂದೆಯನ್ನು ತಯಾರಿಸಿ ಒಂದು ವರ್ಷ ಕಳೆದಿದ್ದರೂ, ಅದನ್ನು ವಿಧಾನ ಸಭೆಯಲ್ಲಿ ಮಂಡಿಸಲಾಗಿಲ್ಲ.

ಈ ವರದಿಯಲ್ಲಿ ಮನೆಗೆಲಸ ಮಾಡುವ ಮಹಿಳೆಯರ ಬೇಡಿಕೆಯನ್ನು ಇಡಲಾಗಿದೆ:

* ಮನೆಗೆಲಸ ಮಾಡುವ ಮಹಿಳೆಯರನ್ನು ಕೆಲಸಗಾರರೆಂದು ಪರಿಗಣಿಸಬೇಕು.
* ಅವರಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಬೇಕು.
* ವಾರದಲ್ಲಿ ಒಂದು ದಿನ ರಜಾ ನೀಡಬೇಕು. ಸಂಪೂರ್ಣ ವೇತನದೊಂದಿಗೆ ಹನ್ನೊಂದು ತಿಂಗಳು ಕೆಲಸ ಮಾಡುವ ಮಹಿಳೆಯರಿಗೆ ಒಂದು ತಿಂಗಳ ರಜೆಯನ್ನು ಕಡ್ಡಾಯವಾಗಿ ನೀಡಬೇಕು.
* ಅನಾರೋಗ್ಯ ರಜೆ ಸೌಲಭ್ಯ, ಒಂದು ತಿಂಗಳ ಹಬ್ಬದ ಭತ್ಯೆಯನ್ನು ನೀಡಬೇಕು.

ಜನಸಾಮಾನ್ಯರು ಅವರನ್ನು ಮನುಷ್ಯರೆಂದು ಪರಿಗಣಿಸಿ, ಮಾನವೀಯತೆ, ಗೌರವ, ಘನತೆಯಿಂದ ನಡೆಸಿಕೊಳ್ಳಬೇಕು. ಅವರಿಗೆ ನ್ಯಾಯಯುತವಾದ ವೇತನ ನೀಡುವುದರೊಂದಿಗೆ ಅವರನ್ನು ಸೇವಕರೆಂದು ಕರೆಯುವುದನ್ನು ನಿಲ್ಲಿಸಬೇಕು.

ಈ ಚಳುವಳಿಯು ಮನೆಗೆಲಸ ಮಾಡುವ ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿದೆ. ಹಲವಾರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಈ ಮಹಿಳೆಯರಲ್ಲಿ ಜಾಗೃತಿ ಮೂಡಿದೆಯಲ್ಲದೆ, ನಾಯಕತ್ವದ ಗುಣಲಕ್ಷಣಗಳನ್ನು ಈ ಮಹಿಳೆಯರು ಪಡೆದಿದ್ದಾರೆ. ಮನೆಗೆಲಸ ಮಾಡುವ ಎಳೆಯ ಮಕ್ಕಳನ್ನು ಇಂದು ಬಾಲ ಕಾರ್ಮಿಕರೆಂದು ಪರಿಗಣಿಸಿ, ಅವರ ಅಭಿವೃದ್ಧಿಗಾಗಿ ಪ್ರಯತ್ನಿಸಲಾಗುತ್ತದೆ.

ಮನೆಗೆಲಸ ಮಾಡುವ ಮಹಿಳೆಯರ ಗೌರವ, ಸ್ವಾಭಿಮಾನ, ಘನತೆಯನ್ನು ಪುನಃ ಪಡೆಯಬೇಕೆಂದರೆ, ಎಲ್ಲ ಕಡೆಯಿಂದಲೂ ಅವರಿಗೆ ಬೆಂಬಲ ಪ್ರೋತ್ಸಾಹ, ಸಹಕಾರ ದೊರೆಯ ಬೇಕಾಗುತ್ತದೆ. ಮನೆಗೆಲಸ ಮಾಡುವ ಮಹಿಳೆಯರ ಹಕ್ಕುಗಳು, ಮಾನವೀಯ ಹಕ್ಕುಗಳು.

❑ *ಸಿಸ್ಟರ್ ಸೀಲಿಯ*

ಕರ್ನಾಟಕ ಮನೆಗೆಲಸ ಮಾಡುವ ಮಹಿಳಾ ಚಳುವಳಿಯ ಸಂಚಾಲಕಿ

(ಪುಟ 12ರಿಂದ ಮುಂದುವರಿದೆ)

ಆಯಾ ಕೆಲಸ ಮಾಡಿಕೊಂಡು 150 ಅಥವಾ 200 ರೂಪಾಯಿ ಸಂಪಾದಿಸುತ್ತಿದ್ದ ಶಾರದಮ್ಮನಿಗೆ ಇಬ್ಬರೂ ಮಕ್ಕಳು. ಹೀಗೇ ಮೆಡಿಸನ್ ಫ್ಯಾಕ್ಟರಿಯಲ್ಲಿ ಕೆಲಸ ಯಾವಾಗ ಮೆಡಿಸನ್ ಸೌತೆಕಾಯಿ ಹೆಚ್ಚು ಇರುತ್ತೋ ಆಗ ಫ್ಯಾಕ್ಟರಿಯ ಮುಂದೆ ಹೋಗಿ ನಿಂತರೆ ಸಾಕು, ಕೆಲಸಕ್ಕೆ ಸೇರಿಸಿಕೊಂಡು ಬಿಡುತ್ತಾರೆ. ಶಾರದಮ್ಮ ಸುಮಾರು 4-5 ವರ್ಷಗಳಿಂದ ಸೌತೆಕಾಯಿ ಮೆಡಿಸನ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿ ಕೊಂಡಿದ್ದವರು. ಆರನೆಯ ವರ್ಷದಲ್ಲಿ ಅವರಿಗೆ ಕೆಲಸ ಇಲ್ಲ. ಹಾಗೆಂದು ಆಕೆಯನ್ನು ಮನೆಗೆ ವಾಪಸ್ಸು ಕಳಿಸಲಾಗಿದೆ. ಯಾಕೆಂದರೆ ಅವರ ಸರ್ವೀಸನ್ನು ಬ್ರೇಕ್ ಮಾಡುವು ದಕ್ಕೋಸ್ಕರ. ಮತ್ತೆ ಸೌತೆಕಾಯಿ ಹೆಚ್ಚಿರುವಾಗ ಆಕೆಯನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ, ಹೊಸದಾಗಿ ಯಾವ ಸೇವಾ ಅವಧಿಯೂ ಆಕೆಗೆ ಇರುವುದಿಲ್ಲ. ಶಾರದಮ್ಮನ ಮಗಳು ಗಾರ್ಮೆಂಟ್ಸ್‌ಗೆ ಹೋಗುತ್ತಾ ಇದ್ದವಳಿಗೂ ಇದೇ ಪರಿಸ್ಥಿತಿ. ಇಬ್ಬರಿಗೂ ಕೆಲಸವಿಲ್ಲ. ಈಗ ಮುಂದಿನ ದಿನಗಳನ್ನು ಅವರು ನೂಕುವುದು ಹೇಗೆ?

ಅಭದ್ರತೆ ಎಲ್ಲಾ ಫ್ಯಾಕ್ಟರಿಗಳಲ್ಲಿ ಎದ್ದುಕಾಣುವ ಮುಖ್ಯ ಅಂಶ. ಶಾರದಮ್ಮನ ಹಾಗೆ ಸುಮಾರು ವರ್ಷ ಕೆಲಸ ಮಾಡಿ ಬರಿಗೈಯಲ್ಲಿ ಹಿಂತಿರುಗುವವರು ಹಲವಾರು ಜನ ಉಸಿರೆತ್ತುವ ಹಾಗೆಯೇ ಇಲ್ಲ.

ಕೆಲಸ ಇರುವಾಗ ತುಂಬಾ ಸುಲಭವಾಗಿ ಫ್ಯಾಕ್ಟರಿಯ ಒಳಗಡೆ ಕರೆದುಕೊಳ್ಳುವ ಈ ಮಹಿಳೆಯರಿಗೆ ಯಾವುದೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುವುದಿಲ್ಲ. ಮೌಖಿಕ ವಾಗಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ, ಮೌಖಿಕವಾಗಿಯೇ ವಾಪಸ್ಸು ಕಳಿಸಿಬಿಡುತ್ತಾರೆ. ಕೆಲಸವಿಲ್ಲವೆಂದು ಮನೆಗೆ ಕಳಿಸಿಬಿಡುವ ಮಹಿಳಾ ಕಾರ್ಮಿಕರಿಗೆ ದುಡಿದ ಹಣವನ್ನೂ ಸಹ ನ್ಯಾಯವಾಗಿ ನೀಡಿರುವುದಿಲ್ಲ. ಆಗ ಬನ್ನಿ, ಈಗ ಬನ್ನಿ ಎಂದು ಹೇಳುವ ಯಜಮಾನರುಗಳು ಹೆಚ್ಚು ಬಲವಂತವಾಗಿ ದುಡಿದ ಹಣ ಕೊಟ್ಟುಬಿಡಿ ಎಂದರೆ, ಗಲಾಟೆ ಮಾಡಿದರೆ ಪುರುಷ ಕಾರ್ಮಿಕನೊಬ್ಬನಿಗೆ ಪೊಲೀಸ್ ಠಾಣೆಯಲ್ಲಿ ಹೊಡೆಯಿಸಿದ ಉದಾಹರಣೆಗಳೂ ಸಹ ಇವೆ.

ಹೊಸಕೋಟೆಯ ಕಡೆಯಲ್ಲಿ ಒಂದು ಗಾರ್ಮೆಂಟ್ಸ್‌ಗೆ ಹೋಗುವ ಶಾಂತಿಗೆ ಎರಡು ಮಕ್ಕಳು. ಗಂಡನೂ ಹೀಗೆಯೇ ಒಂದು ಪುಟಾಣಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾನೆ. ಬೆಳಿಗ್ಗೆ 8 ಗಂಟೆಗೆ ಮನೆಬಿಟ್ಟು ಸುಮಾರು 20 ನಿಮಿಷ ನಡೆದರೆ ಒಂದು ಫ್ಯಾಕ್ಟರಿಯ ವ್ಯಾನ್ ಬರುತ್ತದೆ. ಕಾಡುಗೋಡಿಯ ಒಳಗಡೆ ಗೇಟ್‌ನಿಂದ ಒಂದೇ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋಗುವ ಹಲವಾರು ಮಹಿಳಾ ಕಾರ್ಮಿಕರಿದ್ದಾರೆ. ಹಾಗಾಗಿ ವ್ಯಾನ್ ಒಳಗಡೆ ಗೇಟಿಗೆ ಕಳಿಸಿ ಅಲ್ಲಿ ಒಂದು ಸ್ಥಳದಲ್ಲಿ ಮಹಿಳಾ ಕಾರ್ಮಿಕರು ಹತ್ತಲು ಅನುಕೂಲ ಮಾಡಿಕೊಡಬಹುದಲ್ಲ ಎಂಬುದು ಶಾಂತಿಯ ಆಶಯ. ಆದರೆ ಕೇಳಲು ಎಲ್ಲರಿಗೂ ಭಯ. ಒಬ್ಬರು ಅಥವಾ ಇಬ್ಬರು ಕೇಳೋಕೆ ಆಗೋಲ್ಲ. ಎಲ್ಲರೂ ಸೇರ್ಕಿ ಹೋದರೆ ಸಂಘಟಿತರಾಗ್ತಾರೆ, ಯೂನಿಯಸ್ ಮಾಡ್ತಾರೆ ಎನ್ನುವ ಭಯ. ಹಾಗಂತ ಸುಮ್ಮನೇ ಇರೋಕೆ ಆಗೋಲ್ಲ. ಕೇಳಿದ್ರೆ ಕೆಲಸ ಕಳೆದುಕೊಳ್ಳುವ ಭಯ.

ಇಂತಹ ಭಯ ಆತಂಕಗಳಲ್ಲಿಯೇ ಈ ಮಹಿಳೆಯರು ಬದುಕುತ್ತಾರೆ. ದುಡಿಯುವ ಸ್ಥಳದಲ್ಲಿ ಅವರ ಸಂಪೂರ್ಣ ವಿಧೇಯತೆಯನ್ನು ನಿರೀಕ್ಷೆ ಮಾಡಲಾಗುತ್ತದೆ. ಯಾವುದೇ ರೀತಿಯ ತೊಂದರೆಗಳನ್ನು ಬಾಯಿಬಿಟ್ಟು ಹೇಳಬಾರದು. ಹಾಗೆ ಏನಾದರೂ ಬಾಯಿಬಿಟ್ಟು ಹೇಳಿದಲ್ಲಿ ಮನೆಗೆ ವಾಪಸ್ಸು ಹೋಗುವುದು ಗ್ಯಾರಂಟಿ. ಹೀಗೆ ಅಸಂಘಟಿತರಾಗಿರುವುದು ಇಂತಹ ಫ್ಯಾಕ್ಟರಿಗಳ ಮುಖ್ಯ ಅಂಶವಾಗಿರುತ್ತದೆ. ಯಾವುದೇ ಲೇಬರ್ ಯುನಿಯನ್‌ಗಳ ಜೊತೆ ಸಂಪರ್ಕವಿರದ ಇಂತಹ ಫ್ಯಾಕ್ಟರಿಗಳಲ್ಲಿ ಯಜಮಾನರ ಲಾಭಕ್ಕೆ ಮಾತ್ರ ಪೂರಕ ವಾಗಿರುವ ಈ ಮಹಿಳೆಯರು ಆಗಿಂದಾಗ್ಗೆ ಕೆಲಸ ಕಳೆದು ಕೊಳ್ಳುತ್ತಾ ಹತ್ತು-ಹಲವಾರು ಫ್ಯಾಕ್ಟರಿಗಳ ಸುತ್ತ ಓಡಾಡು ತ್ತಿರುತ್ತಾರೆ.

'ಓ ಫಾರಂ' ಹತ್ತಿರವಿರುವ ಅಂತರ್ ರಾಷ್ಟ್ರೀಯ ಟೆಕ್ ಪಾರ್ಕ್‌ನಲ್ಲಿ ಕೆಲಸ ಮಾಡುವ ಇಬ್ಬರು ಮಹಿಳೆಯರು ಅಲ್ಲಿ 'ಆಫೀಸ್ ಬಾಯ್' ಕೆಲಸ ಮಾಡುತ್ತೇವೆ ಎನ್ನುತ್ತಾರೆ. ಬೆಳಿಗ್ಗೆ ಏಳು ಗಂಟೆಯಿಂದ ಸಂಜೆ 4-30ರ ವರೆಗೆ ಒಂದು ಪಾಳಿಯಾದರೆ, ಬೆಳಿಗ್ಗೆ 9 ಗಂಟೆಯಿಂದ ಸಂಜೆ 6ರ ವರೆಗೆ ಇನ್ನೊಂದು ಪಾಳಿ. ಇವರದ್ದು ಖಾಯಂ ಕೆಲಸವಲ್ಲ. ಗುತ್ತಿಗೆ ಕೆಲಸ, ಬೇಡ ಎಂದರೆ ತೆಗೆದುಹಾಕಿಬಿಡುಬಹುದು. ಕಾಫೀ, ಟೀ, ಹಾಲು ಕಾಯಿಸುವುದು, ಬೇಕೆನ್ನುವವರಿಗೆ ಸರಬರಾಜು ಮಾಡುವುದು ಇವರ ಕೆಲಸ. ಇವರ ಸಂಬಳ 1500/- ರೂ.ಗಳು.

ಹೀಗೆ ಕಾಡುಗೋಡಿ, ವೈಟ್‌ಫೀಲ್ಡ್ ಸುತ್ತ ಇರುವ ಕಾರ್ಖಾನೆಗಳಲ್ಲಿ ಸಾವಿರಾರು ಮಹಿಳೆಯರು ಇಂದು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಗುಂಪು-ಗುಂಪಾಗಿ ಬೆಳಿಗ್ಗೆ ಕೆಲಸಕ್ಕೆ ಹೋಗುವ ಮಹಿಳೆಯರನ್ನು ಕಂಡಾಗ ಪರವಾಗಿಲ್ಲ

ಎನ್ನುವ ಹಾಗೆ ಕಾಣಿಸಿದರೂ ಸಹ ಅವರು ಅನುಭವಿಸುವ ಆತಂಕ, ಭಯಗಳನ್ನು ಹೀಗೆ ಪಟ್ಟಿ ಮಾಡಬಹುದು.

ಕೆಲಸದ ಅಭದ್ರತೆ :

1. ವಿರೋಧ ಮಾಡಲಾಗದಂತಹ ಪರಿಸ್ಥಿತಿ.
2. ಹೆಚ್ಚು ಅವಧಿ ಕೆಲಸ, ಕಡಿಮೆ ಸಂಬಳ
3. ಸಂಬಳ ನಿಗದಿಯಾದ ದಿನಾಂಕದಂದು ಕೊಡದಿರುವುದು.
4. ಕೆಲಸ ಇಲ್ಲವೆಂದು ಆಗಾಗ್ಗೆ ಮನೆಗಳಿಗೆ ಕಳಿಸಿಬಿಡುವುದು.
5. ಸರ್ವೀಸ್ ಬ್ರೇಕ್ ಮಾಡುವುದು.

ಈ ಅಸಂಘಟಿತ ಘಟಕಗಳಲ್ಲಿ ಉದಾರೀಕರಣದ ಹರವುಗಳು ಕಾಣಿಸಿಕೊಳ್ಳತೊಡಗುತ್ತಿರುವಂತೆಯೇ ಮಹಿಳೆಯರ ಬದುಕು ಅಸಹನೀಯವಾಗತೊಡಗಿದೆ. ಒಂದು ಕಡೆ ಆರ್ಥಿಕ ಸ್ವಾತಂತ್ರ್ಯವಿರುವ ಹಾಗೆ ಕಂಡರೂ ಒಳಗಿನ ಬದುಕು ಧಣಿಯಿಂದ ಕೂಡಿದ್ದಾಗಿದೆ. ಉದಾರೀಕರಣ ಅನಿವಾರ್ಯವಾಗಿ ಮಹಿಳೆಯರನ್ನು ದುಡಿತಕ್ಕೆ ಎಳೆದಷ್ಟು ಸುಲಭವಾಗಿ ಅವರ ಬದುಕಿನ ಕಷ್ಟ-ಕಾರ್ಪಣ್ಯಗಳಿಗೆ ಮುಖ ಕೊಡುವುದಿಲ್ಲ. ಹಾಗಾಗಿ ಈ ಮಹಿಳೆಯರು ಸಂಘಟಿತರಾಗುವುದು ಅಗತ್ಯ. ಈ ದಿಕ್ಕಿನಲ್ಲಿ ಕಾರ್ಮಿಕ ಸಂಘಟನೆಗಳು ಹಾಗೂ ಮಹಿಳಾ ಸಂಘಟನೆಗಳು ವಿಶೇಷ ಗಮನ ನೀಡಿ ದುಡಿಯುವ ಅಗತ್ಯವಿದೆ.

○

ಮಹಿಳೆಯರ ವಿರುದ್ಧ ಅಪರಾಧಗಳು ಮಾತ್ರ ಹೆಚ್ಚುತ್ತಲೇ ಇದೆ. ಅವನ್ನು ವಿಂಗಡಿಸಿ ಹೇಳಬೇಕೆಂದರೆ ವರ್ಷಕ್ಕೆ ಸರಾಸರಿ 9800 ಅತ್ಯಾಚಾರದ ಪ್ರಕರಣಗಳು, 20,600 ಕಿರುಕುಳದ ಪ್ರಕರಣಗಳು, ವರದಕ್ಷಿಣೆ ಸಾವು 5100, ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆ ಇತ್ಯಾದಿಗಳೆಲ್ಲಾ ಸೇರಿ 10,250 ಪ್ರಕರಣಗಳು. ರಾಷ್ಟ್ರೀಯ ಅಪರಾಧ ದಾಖಲೆಗಳ ವರದಿ ಪ್ರಕಾರ ಪ್ರತಿ 5 ನಿಮಿಷಗಳಿಗೊಮ್ಮೆ ಮಹಿಳೆಯರ ಮೇಲೆ ಅಪರಾಧ ಎಸಗಲಾಗುತ್ತಿದೆ. ಇದು ಬೆಳಕಿಗೆ ಬರುವ ಪ್ರಕರಣಗಳ ಅಂಕಿ ಅಂಶ. ಒಳಗೊಳಗೇ ಅಪರಾಧಗಳೆಷ್ಟೋ ಆಗುತ್ತಿರುತ್ತವೆ.

ಮರೆತು ಬಿಡಬೇಡ ಗೆಳತಿ

❑ *ಕೋಮಲ ಕಂಟಲಗೆರೆ*

ಮರೆತುಬಿಡಬೇಡ ಗೆಳತಿ
ಮಧುರ ಭ್ರಾಂತಿಯೊಳು ಮುಳುಗಿ
ನಿನ್ನ ತನವನು ನೀ

ಎಂದೋ ಬರುತ್ತಾನೆ
ಕನಸಿನ ರಾಜಕುಮಾರ
ಹೊತ್ತು ತರುತ್ತಾನೆ
ಸ್ವರ್ಗ ಸುಖವನೆಲ್ಲ
ಹಾಸಿ ಬಿಡುತ್ತಾನೆ ನನ್ನಡಿಗೆ
ಎಂದಂಬಲಿಸಿ ಮರೆತು ಬಿಡಬೇಡ
ಗೆಳತಿ ಚಿಂತಿಸುವ ಅಗತ್ಯವನ್ನೆ.

ನನ್ನ ನಗೆಯಲಿ ಮಿಂಚಾಗುತ್ತಾನೆ
ನನ್ನಳುವಿನಲಿ ಕಂಬನಿಯಾಗುತ್ತಾನೆ
ಎಂದೇನೆಲ್ಲಾ ಕನಸಿ ಮರೆವೆ
-ಯಾಗದಿರು 'ಫ್ಯಾಷನ್ನಿನ
ಲೋಕದಿಂದ ದೂರವಾದಂತೆ
ಹಳೆಯ ಹಾಡು

ಕಟ್ಟಿಟ್ಟು ಬಿಡಬೇಡ
ಕೆಚ್ಚು, ನೆಚ್ಚು, ಆತ್ಮಸ್ಥೈರ್ಯ
ಸ್ವಾಭಿಮಾನಗಳನೆಲ್ಲಾ
ಸಿದ್ಧಳಾಗುತ್ತಿರಬೇಡ ಗೆಳತಿ
ಕೊರಳ ಕೊಂಕಿಸಲು
ಗಿಡುಗ ಬದುಕಿನ
ಸ್ವಪ್ನ ಸದೃಶ್ಯದೊಳಕ್ಕೆ.

○

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067